

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 28 Wednesday 02-10-2024 E-mail : maruti.b.hosamani76@gmail.com Page: 4 Price : Rs. 1/-

# ಗಣಿ ಅಧಿಕಾರಿ ಪುಷ್ಪಲತಾರ ಕುಮ್ಮಕ್ಕಿನಿಂದ ರಾಜಾರೋಷವಾಗಿ ನಡೆಯುತ್ತೆ ಮರಳು ಸಾಗಣೆ

**ಸಿಹಿ ಕಹಿ ಸುದ್ದಿ**

**ಮಾನ್ವಿ :** ಖನಿಜ ಸಂಪತ್ತನ್ನು ರಕ್ಷಣೆ ಮಾಡಿ ಕಾನೂನು ಏನೆಂದು ಖದೀಮರಿಗೆ ತೋರಿಸ ಬೇಕಾದ ಕೆಲಸ ಗಣಿ ಅಧಿಕಾರಿಗಳ ಕೆಲಸ. ಆದರೆ, ರಾಯಚೂರು ಗಣಿ ಅಧಿಕಾರಿ ಪುಷ್ಪಲತಾ ಮೇಡಂ ನಿದ್ರೆಗೆ ಜಾರಿದ್ದರಿಂದ ಮಾನ್ವಿ ತಾಲೂಕಿನ ಚೀಕಲಪರ್ವಿ ಸ್ಟಾಕ್ ಯಾರ್ಡ್ ನಿಂದ ರಾಯಲ್ಟಿ ಇಲ್ಲದೆ ಟಿಪ್ಪರ್ ಗಳಲ್ಲಿ ಮರಳು ಸಾಗಣೆಯಾದರು ಕಾನೂನು ಅನ್ನೋದು ಇಲ್ಲಿ ಇದೇನಾ ಅಥವಾ ಸತ್ತೋಗಿದೆನಾ ಎಂಬುದು ತಿಳಿಯದಾಗಿದೆ.

ಹಟ್ಟಿ ಚಿನ್ನದಗಣಿ ಕಂಪನಿ ಯಿಂದ ಮರಳನ್ನು ರಾಯಲ್ಟಿ ಮತ್ತು ಕಾನೂನು ಮಾಪನ ಪ್ರಕಾರ ಟಿಪ್ಪರ್ ಗಲ್ಲಿ ಸಾಗಣೆ ಮಾಡಬೇಕು. ಆದರೆ ನಮ್ಮನ್ನು ಯಾರು ಕೇಳುತ್ತಾರೆಂದು ಅನಾಮಧೇಯ ವ್ಯಕ್ತಿಗಳು ಸ್ಟಾಕ್ ಯಾರ್ಡ್ ನಲ್ಲಿ ಕುಳಿತು ಕೊಂಡು ಅಕ್ರಮವಾಗಿ ಹಗಲು ಮತ್ತು ರಾತ್ರಿ ಸಾಗಣೆಯಾಗಲು ಪ್ರಮುಖ ಕಾರಣವಾಗಿದೆ ಎಂದು ಪರಿಸರವಾದಿಗಳ ಆರೋಪವಾಗಿದೆ.







ಚೀಕಲಪರ್ವಿ ಸ್ಟಾಕ್ ಯಾರ್ಡ್ ನಲ್ಲಿರುವ ಸಿಸಿ ಕ್ಯಾಮೆರಾಗಳು ಸರಿಯಾಗಿ ಕೆಲಸ ಮಾಡದ ಕಾರಣ ಅಕ್ರಮ ಮರಳು ಸಾಗಣೆಗೆ ಪ್ರಮುಖ ಕಾರಣವಾದರೆ, ಗಣಿ ಅಧಿಕಾರಿ ಪುಷ್ಪಲತಾ ಮೇಡಂ ಯಾಕೆ ಮೌನ ತಾಳಿದ್ದಾರೆಂದು ತಿಳಿಯದಾಗಿದೆ.

ಒಂದೇ ರಾಯಲ್ಟಿಯಲ್ಲಿ ಹತ್ತಾರು ಟ್ರಿಪ್ ಮರಳು ಸಾಗಣೆ ಮಾಡುವ ದಂದ- ಚೀಕಲಪರ್ವಿ ಸ್ಟಾಕ್ ಯಾರ್ಡ್ ನಿಂದ ನಡೆಯುತ್ತೆ. ಆದರೆ ಈ ಬಗ್ಗೆ ಕ್ರಮ ಜರುಗಿಸ ಬೇಕಾದ ಗಣಿ ಅಧಿಕಾರಿ ಪುಷ್ಪಲತಾ ಕಾನೂನು ಪಾಲನೆ ಮಾಡುವರೋ ಅಥವಾ ನಮಗ್ಯಾಕೆ ಬೇಕು ಯಾರಾದರು ಖನಿಜ ಸಂಪತ್ತು ಲೂಟಿ ಮಾಡಲಿ ಎಂದು ಸರಕಾರದ ಸಂಬಳ ತಿನ್ನುತ್ತ ಕೂರುವರೋ ಎಂದು ಸಾರ್ವಜನಿಕರ ಆಕ್ರೋಶವಾಗಿದೆ

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಸುಪ್ರೀಂಕೋರ್ಟ್ ಆದೇಶ ಜಾರಿಗೆ ಆಗ್ರಹಿಸಿ ಅ.3.ರಂದು ಮಾನ್ವಿ-ಬಂದ್‌ಗೆ ಕರೆ



**ಮಾನ್ವಿ :** ಒಳ ಮೀಸಲಾತಿ ಜಾರಿ ಮಾಡಬೇಕೆಂದು ಸುಪ್ರೀಂಕೋರ್ಟ್ ಆದೇಶ ನೀಡಿದ್ದು, ರಾಜ್ಯ ಸರಕಾರ ಕೂಡಲೆ ಯಥಾವತ್ತಾಗಿ ಅಕ್ಟೋಬರ್ 2 ರೊಳಗೆ ಜಾರಿ ಮಾಡಬೇಕು ಇಲ್ಲವಾದರೆ ಉಗ್ರವಾಗಿ ಹೋರಾಟ ಮಾಡಬೇಕೆಂದು ಒಳ ಮೀಸಲಾತಿ ಹೋರಾಟದ ಮುಖಂಡ ಪ್ರಕಾಶ್ ಒತ್ತಾಯಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿ, ಒಳ ಮೀಸಲಾತಿ ಜಾರಿಗೆ ಸರಕಾರ ನಿರ್ಲಕ್ಷ್ಯ ತೋರುತ್ತಿರುವುದನ್ನು ಖಂಡಿಸಿ ಅಕ್ಟೋಬರ್ 3 ರಂದು ಮಾನ್ವಿ ಬಂದ್ ಮಾಡಲಾಗುವುದು ಎಂದರು.

ಅಕ್ಟೋಬರ್ 3 ರಂದು ಶಾಂತಿಯುತವಾಗಿ ಹೋರಾಟ ನಡೆಯಲಿದ್ದು, ಶಾಲಾ ಕಾಲೇಜಿನ ಮುಖ್ಯಸ್ಥರು ಹಾಗೂ ಅಂಗಡಿ ಮಾಲಕರು ವ್ಯಾಪಾರ ವಹಿವಾಟು ಬಂದ್ ಮಾಡಬೇಕು ಎಂದು ಮನವಿ ಮಾಡಿಕೊಂಡರು.

ಕಲ್ಯಾಣ ಕರ್ನಾಟಕ ಭಾಗದ 7 ಜಿಲ್ಲೆಗಳಲ್ಲಿ ಹಂತ ಹಂತವಾಗಿ ಹೋರಾಟ ನಡೆಯಲಿದ್ದು, ಅಷ್ಟರೊಳಗೆ ಒಳ ಮೀಸಲಾತಿ ಜಾರಿ ಮಾಡದಿದ್ದರೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಬಂದ್ ಹೋರಾಟ ವಿಸ್ತರಿಸಲಾಗುವುದು ಎಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಹುಸೇನ್ ಭಾಷಾನಕ್ಕುಕದಿ.ಮಾನ್ವಿ**

# ಕೋಗಳಿ ಗ್ರಾಮದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ

**ಕೋಗಳಿ :** ಕೊಟ್ಟೂರು ತಾಲೂಕಿನ ಕೋಗಳಿ ಗ್ರಾಮದ ಶ್ರೀ ವಿನಾಯಕ ಹಿರಿಯ ನಾಗರಿಕರ ಸಂಘದಿಂದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ. ಸಂಘದ ಹಿರಿಯ ನಾಗರಿಕರಿಗೆ ಸನ್ಮಾನ ಮತ್ತು ನೇತ್ರ ಸಂಜೀವಿನಿ ಕಣ್ಣಿಗೆ ಅಮೃತ ಬಿಂದು ಬಿಡುವ ಕಾರ್ಯಕ್ರಮ.

ಕೊಟ್ಟೂರು ತಾಲೂಕಿನ ಕೋಗಳಿ ಗ್ರಾಮದಲ್ಲಿ ಇಂದು ವಿನಾಯಕ ಹಿರಿಯ ನಾಗರೀಕ ಸಂಘದ ವತಿಯಿಂದ 5 ನೇ ವರ್ಷದ ವಾರ್ಷಿಕೋತ್ಸವದ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗಿತ್ತು,ಶ್ರೀ ಪಂಚಾಕ್ಷರಿ ಚರಂತರ್ಯ ಸ್ವಾಮಿಗಳು ಗದ್ದಿಕೇರಿ ಮಠ ಇವರು ದಿವ್ಯ ಸಾನಿಧ್ಯ ವಹಿಸಿ, ಕಾರ್ಯಕ್ರಮಕ್ಕೆ ಶುಭ ಹಾರೈಸಿ ಮಾತನಾಡಿದ್ದರು. ಕಾರ್ಯಕ್ರಮದಲ್ಲಿ ಕಣ್ಣಿನ ಸಮಸ್ಯೆ ಇರುವವರಿಗೆ ಉಚಿತ ನೇತ್ರ ಸಂಜೀವಿನಿ ಅಮೃತ ಬಿಂದು ಬಿಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಣ್ಣಿಗೆ ಅಮೃತ ಬಿಡುವ ಕಾರ್ಯಕ್ರಮವನ್ನು ಡಾ, ಮಹೇಶ್ ಮತ್ತು ತಂಡದವರು ನೆರವೇರಿಸಿದರು.





ಗ್ರಾಮದ ಸುಮಾರು 150 ಕ್ಕೂ ಹೆಚ್ಚು ಜನ ಇದರ ಸದುಪಯೋಗ ಪಡೆದು ಕೊಂಡರು. ಸಂಘದ ಹಿರಿಯ ಸದಸ್ಯರಾದ ಬಿ ಉಮಾಪತಿ ಮತ್ತು ಜಿ ಸಂಗೊಡೆಪ್ಪ ಇವರಿಗೆ ಸ್ವಾಮೀಜಿಗಳು ಸನ್ಮಾನ್ಯ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಕ್ರಸಾಲಿ ದೊಡ್ಡವೀರಪ್ಪ ವಹಿಸಿ ಕೊಂಡಿದ್ದರು. ಹಿರಿಯ ನಾಗರೀಕ ಸಂಘದ ಅಧ್ಯಕ್ಷರಾದ ಹೆಚ್. ವೀರಭದ್ರಪ್ಪ,ಉಪಾಧ್ಯಕ್ಷರಾದ ಬಿ.ಉಮಾಪತಿ,ಕಾರ್ಯದರ್ಶಿ ಮತ್ತೂರು ಬಸವರಪ್ಪ , ಖಜಾಂಚಿ ಗಚ್ಚಿನ ಕೊಟ್ರೇಶಪ್ಪ, ಸದಸ್ಯರಾದ ವಿ ಎಂ ಚಂದ್ರಶೇಖರಯ್ಯ,ಎನ್ ವಿಶ್ವಾನಾಥ್ ಗೌಡ, ಹೊಂಬಾಳಿ ಕೊಟ್ರೇಶಪ್ಪ,ಮತ್ತೂರು ಮಹೇಶಪ್ಪ,ಎನ್ ಗುರು ಬಸವನಗೌಡ,ಹೆಚ್ ಎಂ ಅಶೋಕಯ್ಯ, ನವ್ವಪ್ಪ ಎಂ ಶೇಖರಪ್ಪ, ಮೇಘರಾಜ ಮುಂತಾದವರು ಉಪಸ್ಥಿತರಿದ್ದರು.

ಪಂಚಾಕ್ಷರಿ ಸಂಗೀತ ಪಾಠಶಾಲಾ ಮಕ್ಕಳು ಪ್ರಾಥನೆ ಗೀತೆ ಹಾಡಿದರು. ಹೆಚ್ ಎಂ ಶಂಕ್ರಯ್ಯ ನವರು ಕಾರ್ಯಕ್ರಮವನ್ನು ನಿರ್ವಹಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

# ಶಾಲಾ ಆರೋಗ್ಯ ಕಾರ್ಯಕ್ರಮ



**ಬಾಗಲಕೋಟೆ :** ನಗರದ ಬಸವೇಶ್ವರ ನರ್ಸಿಂಗ್ ಮಹಾವಿದ್ಯಾಲಯದ ಸಮುದಾಯ ಆರೋಗ್ಯ ಶುಸ್ರೋಷ ವಿಭಾಗದ ವತಿಯಿಂದ ಹಳ್ಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಆರೋಗ್ಯ ಕಾರ್ಯಕ್ರಮ ಆಯೋಜನೆ ಮಾಡಿಲಾಗಿತ್ತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ಜಯಶ್ರೀ ಇಟ್ಟಿ ಮಾರ್ಗದರ್ಶನದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕಿರು ನಾಟಕದ ಮೂಲಕ ವೈಯಕ್ತಿಕ ನೈರ್ಮಲ್ಯ, ಮೋಬೈಲ ಬಳಕೆಯಿಂದ ಆಗುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸಿದರು. ಪ್ರತಿನಿತ್ಯ 2 ಗಂಟೆಗೂ ಹೆಚ್ಚು ಕಾಲ ಸ್ಮಾರ್ಟ ಫೋನಗಳನ್ನು ಬಳಸುವುದರಿಂದ ಕುತ್ತಿಗೆ ,ಭುಜದ ನೋವು ಮತ್ತು ಬೆನ್ನು ನೋವಿಗೆ ಕಾರಣವಾಗಬಹುದು. ಅದರಲ್ಲೂ ಮಲಗಿಕೊಂಡು ಮೋಬೈಲ್ ಬಳಸುವುದರಿಂದ ಈ ಸಮಸ್ಯೆ ಹೆಚ್ಚಾಗಲಿದೆ ಎಂದು ಲಕ್ಷ್ಮೀ ಗೊಂದಿ ತಿಳಿಸಿದರು.

ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಎಮ್.ಜಿ.ಬುದಿಹಾಳ ಸರ್ ಜಂಕ್ ಫೂಡ್ ಅಂದರೆ ಸಕ್ಕರೆ ಮತ್ತು ಕೊಬ್ಬನಂತಹ ಮ್ಯಾಕ್ರೋನ್ಯೂಟ್ರಿಯೆಂಟ್‌ಗಳಿಂದ ಹೆಚ್ಚಿನ ಕ್ಯಾಲೋರಿಗಳನ್ನು ಹೊಂದಿರುವ ಆಹಾರವನ್ನು ಸೇವಿಸಬಾರದು.

ಆರೋಗ್ಯಕರ ಆಹಾರ ಉದಾ. ದ್ವಿದಳ ಧಾನ್ಯಗಳು, ಮೊಸರು, ಬಿನ್ಸ್, ಹಸಿರು ತರಕಾರಿಗಳನ್ನು ಸೇವಿಸಬೇಕೆಂದು ಹೇಳಿದರು.

ಧ್ಯಾನ ಮುದ್ರೆ, ಪ್ರಾಣಾಯಾಮಗಳ ಮೂಲಕ ಏಕಾಗ್ರತೆ, ಓದಿನಲ್ಲಿ ಪ್ರಗತಿ ಸಾಧ್ಯವೆಂದು, ಮತ್ತು ಅಂಗಡಿಗಳಲ್ಲಿ ಸಿಗುವ ಅಸುರಕ್ಷಿತ ಆಹಾರಕ್ಕೂ ಮನೆಯಲ್ಲಿ ತಯಾರಿಸುವ ಆರೋಗ್ಯಕರ ಆಹಾರಕ್ಕೂ ಇರುವ ವ್ಯತ್ಯಾಸಗಳ ಬಗ್ಗೆ ಹಾಗೂ ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ವಿಧಾನದ ಬಗ್ಗೆ ಮಹೇಶ ವಾಂಗಿ ಇವರು ತಿಳಿಸಿಕೊಟ್ಟರು.



ಕಲಾದಗಿ ಸಮೀಪದ ಸಂಶಿ ಕ್ರಾಸ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಪೋಷಣ ಅಭಿಯಾನ ಕಾರ್ಯಕ್ರಮ ನಡೆಯಿತು.

## ಎನ್.ಎಸ್.ಎಸ್‌ನಿಂದ ಸುಭದ್ರ ರಾಷ್ಟ್ರ ನಿರ್ಮಾಣ- ಮೌನೇಶ್ ಕಮ್ಮಾರ



**ಬಾಗಲಕೋಟೆ :** ನಾಗರಿಕ ಸಮಾಜ ನಿರ್ಮಾಣ-ಕ್ಕಾಗಿ ಎನ್.ಎಸ್.ಎಸ್‌ನಂತಹ ವೇದಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಬಾಗವಹಿಸಬೇಕು ಇದರಿಂದ ಸುಭದ್ರ ರಾಷ್ಟ್ರ ನಿರ್ಮಾಣವಾಗುತ್ತದೆ ಎಂದು ಬೀಳಗಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಮೌನೇಶ್ ಕಮ್ಮಾರ್ ಹೇಳಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲದಲ್ಲಿ ನಡೆದ ಎನ್.ಎಸ್.ಎಸ್ ಸಂಸ್ಥಾಪನಾ ದಿನಚಾರಣೆಯ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು ಎನ್.ಎಸ್.ಎಸ್‌ನಿಂದ ಸಾಮಾಜಿಕ ಜವಾಬ್ದಾರಿ ವಿದ್ಯಾರ್ಥಿಗಳಲ್ಲಿ ಬೆಳೆಯುತ್ತದೆ. ಸಂಘಟಿತ ಬದುಕನ್ನು ಕಲಿಸುತ್ತದೆ, ಉತ್ತಮ ಗುಣಮಟ್ಟದ ಜೀವನ ನಡೆಸಲು ಸಾಧ್ಯ. ವಿದ್ಯಾರ್ಥಿಗಳು ತದೇಕ ಚಿತ್ತದತ್ತ ಗಮನ ಹರಿಸಬೇಕು. ಮಾನಸಿಕ ತೋಳಲಾಟದಿಂದ ದೂರವಿದ್ದು ತಮ್ಮ ಕರ್ತವ್ಯಗಳನ್ನು ಅಚ್ಚುಕಟ್ಟಾಗಿ ಪಾಲಿಸಿದರೆ ಯಶಸ್ಸು ಸಾಧ್ಯ ಎಂದರು.

ಇದೇ ಸಂಧರ್ಭದಲ್ಲಿ ಉಪನ್ಯಾಸಕರಾಗಿ ಮಾತನಾಡಿದ ಪ್ರಾಧ್ಯಾಪಕ ಡಾ.ಎಸ.ಡಿ ಕೆಂಗಲಗುತ್ತಿ ರಾಷ್ಟ್ರೀಯ ಸೇವಾ ಯೋಜನೆ 1969ರಲ್ಲಿ ಜಾ-ರಿಗೆ ಬಂದಿದ್ದು, ಕಾಲೇಜಿನಲ್ಲಿ ವಿದ್ಯಾರ್ಥಿಗಳು ಜವಾಬ್ದಾರಿ ಇಂದ ಕ್ರಿಯಾಶೀಲರಾಗಬೇಕೆಂಬುವುದು ಇದರ ಸದುದ್ದೇಶವಾಗಿದೆ. ಯುವಕರೆ ಭವ್ಯ ಭಾರತದ ಕನಸುಗಾರರು, ವಿದ್ಯಾರ್ಥಿಗಳು ಜಾತ್ಯಾತೀತ, ಧರ್ಮಾತೀತ, ಲಿಂಗಾತೀತವಾಗಿ ಸ್ವಪ್ರೇರಣೆಯಿಂದ ಕೆಲಸ ಮಾಡಲು ಪ್ರೇರೆಪಿಸುತ್ತದೆ, ಸಮಾಜದಲ್ಲಿ ಉತ್ತಮರಾಗಲು ಸ್ವ-ಆತ್ಮವಾಲೋಕನ ಮಾಡಿಕೊಳ್ಳಬೇಕು ಎಂದರು.

ಪ್ರಾಚಾರ್ಯರಾದ ಎಸ್.ಆರ್ ಮುಗನೂರಮಠ ಮಾತನಾಡಿ ವಿದ್ಯಾರ್ಥಿಗಳು ದೇಶ ಮುನ್ನಡೆಸುವ ಕೆಲಸ ಮಾಡಬೇಕು. ನಮ್ಮ ದಿನನಿತ್ಯದ ಚಟುವಟಿ-ಕೆಗಳಿಗೆ ಇನ್ನೊಬ್ಬರ ಮೇಲೆ ಅವಲಂಬನೆಯಾಗದೆ ನಮ್ಮ ಕೆಲಸಗಳನ್ನು ನಾವೇ ಮಾಡಿಕೋಳ್ಳಬೇಕು, ಯುಕ್ತತೆ ಮತ್ತು ಉಪಯುಕ್ತತೆ ಗುಣ ಬೆಳಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ಸಂಂ-ಯೋಜಕರಾದ ಡಾ.ಎ.ಯು ರಾಠೋಡ್. ಎನ್.ಎಸ್. ಎಸ್ ಅಧಿಕಾರಿಗಳಾದ ಎಮ್.ಎಚ್.ವಡ್ಡರ, ಡಾ ವೀರುಪಾಕ್ಷಿ ಎನ್.ಬಿ ಹಾಗೂ ವಿದ್ಯಾರ್ಥಿಗಳು ಇದ್ದರು. ಸಿದ್ಧಾರೂಢ ನಾಗರೆಡ್ಡಿ ನಿರೂಪಿಸಿದರು.

## ಕಬಡ್ಡಿ ಪಂದ್ಯಾಟ: ತೋಳಮಟ್ಟಿ ಪ್ರೌಢ ಶಾಲೆಯ ಮಹಿಳಾ ತಂಡ ಜಿಲ್ಲಾ ಮಟ್ಟಕ್ಕೆ ಆಯ್ಕೆ



**ಬಾಗಲಕೋಟೆ :** ಬೀಳಗಿ ತಾಲೂಕಾ ಮಟ್ಟದ ಬಾಲಕಿಯರ ಕಬಡ್ಡಿ ಪಂದ್ಯಾಟದಲ್ಲಿ ತೋಳಮಟ್ಟಿ ಸರ್ಕಾರಿ ಪ್ರೌಢಶಾಲೆಯ ಬಾಲಕಿಯರು ವಿಜೇತರಾಗಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. 2024 25 ನೇ ಸಾಲಿನ ತಾಲೂಕ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕ್ರೀಡಾಕೂಟಗಳು ತಾಲೂಕಿನ ವೀರ ಸಿಂಧೂರ ಲಕ್ಷ್ಮಣ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದು, ಸೋಮವಾರ ಗುಂಪು ವಿಭಾಗದ ಆಟಗಳು ಜರಗಿದ್ದು, ಇನ್ನ ಮಹಿಳಾ ಕಬ್ಬಡಿ ಫೈನಲ್ ಪಂದ್ಯ ತೆಗ್ಗಿ ಹಾಗೂ ತೋಳಮಟ್ಟಿ ತಂಡಗಳ ನಡುವೆ ರೋಚಕ ಹಣಾಹಣಿ ನಡೆಯಿತು, ಟಾಸ್ ಗೆದ್ದು ಮೈದಾನ್ ಆಯ್ಕೆ ಮಾಡಿಕೊಂಡ ತೆಗ್ಗಿ ತಂಡ,ಸುಧಾನ ಉತ್ತಮ ರೈಡ್ ಹಾಗೂ ಸೃಷ್ಟಿಯ ಜಾಣ್ಮೆಯ ಆಟದಿಂದ ತೋಳಮಟ್ಟಿ ತಂಡ 3 ಅಂಕಗಳಿಂದ ವಿಜಯ ಸಾಧಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದರೂ,ಇನ್ನು ತಮ್ಮ ಮಕ್ಕಳ ಆಟ ಕಬ್ಬಡಿ ಆಟ ನೋಡುವುದಕ್ಕೆ ಪೋಷಕರು ಬಂದಿದ್ದರು.

ಫೈನಲ್ ಪಂದ್ಯದ ನಿರ್ಣಯಕರಾಗಿ ಎಸ್ ಎ ಶೇಡಬಾಳ,ಶಫೀಕ್ ಇನಾಮದಾರ, ಪರಶುರಾಮ್ ಮುತ್ತೂರ,ಬಿ ಎನ್ ಗೌಡರ,ಆರ್ ಎಸ್ ಗೌಡರ ಇದ್ದರು.

# ವ್ಯಕ್ತಿತ್ವದ ವಿಕಾಸಕ್ಕೆ ಎನ್‌ಎಸ್‌ಎಸ್ ಸಹಕಾರಿ

**ಬಾಗಲಕೋಟೆ :** ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆಯನ್ನು ಬೆಳೆಸುವುದರ ಜೊತೆಗೆ ಅವರ ವ್ಯಕ್ತಿತ್ವದ ವಿಕಾಸಕ್ಕೂ ಎನ್-ಎಸ್‌ಎಸ್ ಸಹಕಾರಿಯಾಗಿದೆ ಎಂದು ನಿವೃತ್ತ ಸಹ ಪ್ರಾಧ್ಯಾಪಕ ಜಿ.ಜೆ.ಮೊರಬ ಹೇಳಿದರು.

ಇಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಮತ್ತು ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಘಟಕ1ಹಾಗೂ2,ಮಂಗಳವಾರ ಹಮ್ಮಿಕೊಂಡ ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಸೇವಾ ಕಾರ್ಯದಲ್ಲಿ ತೊಡಗಿ ರಾಷ್ಟ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಬೇಕು. ಎನ್‌ಸಿಸಿ ದೇಶದ ರಕ್ಷಣೆಗಿದ್ದರೆ, ಎನ್‌ಎಸ್-ಎಸ್ ದೇಶವನ್ನು ಕಟ್ಟುವುದರ ಸಲುವಾಗಿದೆ ಎಂದರು.



ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಘಟನೆ, ನಾಯಕತ್ವ ಗುಣ, ಸಂವಹನ ಕಲೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುವ ಎನ್‌ಎಸ್‌ಎಸ್ ದಲ್ಲಿ ಪಾಲ್ಗೊಳ್ಳಬೇಕು. ಶ್ರಮದಾನದ ಮಹತ್ವವನ್ನು ಅರಿತು ಗ್ರಾಮೀಣ ಸಮಸ್ಯಗಳಿಗೆ ಸ್ಪಂದಿಸಬೇಕು. ಆ ಮೂಲಕ ರಾಷ್ಟ್ರದ ಅಭಿವೃದ್ಧಿಯಲ್ಲಿ ಕೈ ಜೋಡಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಶ್ರೀನಿವಾಸ ನರಗುಂದ, ಎನ್‌ಎಸ್‌ಎಸ್ ಹುಟ್ಟು ಹಬ್ಬದ ಸಂದರ್ಭದಲ್ಲಿ ಅಳಿಲುಸೇವೆ ಮಾಡುವವಬಯಕೆಪ್ರಕಟಗೊಳ್ಳಬೇಕು.14ನೇ ಶತಮಾನದ ಲಕ್ಷ್ಮೀಧರಾಮಾತ್ಯ ಹಾಗೂ ಶ್ರವಣಬೆಳಗೊಳದ ಶಾಸನಗಳಲ್ಲಿ ಬಿಂಬಿತ ಸೇವೆಯ ಮಹತ್ವವನ್ನು ಯುವಜನತೆ ಅರಿಯಬೇಕು ಎಂದರು.

ನಿಸ್ವಾರ್ಥ ಸಮಾಜ ಸೇವೆ ಮನಸ್ಸಿಗೆ ನೆಮ್ಮದಿ ತರುತ್ತದೆ. ಸಮಾಜ ಸೇವೆಯ ಮೂಲಕ ಶಿಕ್ಷಣ ನೀಡಿ ಯುವಕರಲ್ಲಿ ಉತ್ಸಾಹ, ಚೈತನ್ಯ ತುಂಬುವಲ್ಲಿ ಎನ್‌ಎಸ್‌ಎಸ್ ಸಹಕಾರಿ. ಇಂತಹ ದಿನಾಚರಣೆಗಳಿಂದ ಸ್ಫೂರ್ತಿ ಪಡೆದು ಸಮಾಜಮುಖಿ ಕಾರ್ಯಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕು ಎಂದರು.

ಕಾರ್ಯಕ್ರಮಾಧಿಕಾರಿ ಎನ್.ಎಚ್.ಹಸಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನವೀನ ಪಾಟೀಲಸ್ವಾಗತಿಸಿದರು.ಸಿದ್ದಪ್ಪಹಿರೇಕುಂಬಿ ನಿರೂಪಿಸಿದರು. ಸಂಗಯ್ಯ ಸಾರಂಗಮಠ ವಂದಿಸಿದರು. ಕಾರ್ಯಕ್ರಮಾಧಿಕಾರಿ ಎಚ್.ಜಿ.ಗೌಡರ, ಉಪನ್ಯಾಸಕರಾದ ಎಸ್.ಎಂ.ಜೇವೂರ, ಕೆ.ಎಸ್.ದಾಸರ, ಎ.ಎ.ಗಂಗಲ್, ಎನ್.ಎಚ್. ಹವಾಲ್ದಾರ, ಎಸ್.ಪಿ.ದೇಶಪಾಂಡೆ ಇದ್ದರು.

## ಬೇಡಿಕೆ ಈಡೇಸುವವರೆಗೆ ಅನಿರ್ಧಿಷ್ಟಾವಧಿ ಮುಷ್ಕರ-ಗ್ರಾಮ ಆಡಳಿತ ಅಧಿಕಾರಿಗಳ ಸಂಘ



**ಬಾದಾಮಿ :** ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸೆ.26 ರಿಂದ ಎಲ್ಲಾ ಬಗೆಯ ಮೋಬೈಲ್ ಆಪ್, ಹಾಗೂ ಅಪ್ಲಿಕೇಶನ್ ಅನ್ನು ಸ್ಥಗಿತಗೊಳಿಸಿ ಲೇಖನಿ ಸ್ಥಗಿತಗೊಳಿಸುವ ಮೂಲಕ ಎಲ್ಲಾ ಬೇಡಿಕೆ ಈಡೇಸುವವರೆಗೆ ಅನಿರ್ಧಿಷ್ಟಾವಧಿ ಮುಷ್ಕರ ರಾಜ್ಯವ್ಯಾಪಿ ಹಮ್ಮಿಕೊಳ್ಳಲಾಗುವುದು ಎಂದು ಎಂಬ ಆದೇಶವನ್ನು ರಾಜ್ಯ ಗ್ರಾಮ ಆಡಳಿತ ಅಧಿಕಾಗಳ ಸಂಘ ಕರೆ ನೀಡಿದ್ದು ಸಮೂಹದ ಎಲ್ಲಾ ಬೇಡಿಕೆಗಳನ್ನು ಈಡೇರಿಸಿ ಉತ್ತಮ ಮತ್ತು ಗುಣಮಟ್ಟದ ರೀತಿಯಲ್ಲಿ ಸಾರ್ವಜನಿಕರ ಮತ್ತು ಸರ್ಕಾರದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅನುಕೂಲ ಮಾಡಿಕೊಡಬೇಕೆಂದು ಸಂಘವು ಸರ್ಕಾರಕ್ಕೆ ಆಗ್ರಹಿಸಿದರು

ಸಮಘದ ಗೌರವಧ್ಯಕ್ಷ ಬಿ.ಎಂ ಹಳ್ಳೂರ, ಅಧ್ಯಕ್ಷ ಆರ್.ವೈ ಯಲ್ಲಿಗುತ್ತಿ, ಉಪಾಧ್ಯಕ್ಷ ಸಲಾಖೆ, ಖಜಾಂಚಿ ಅಮೃತಾ ಪಾಟೀಲ, ಪ್ರಧಾನ ಕಾರ್ಯದರ್ಶಿ ಶಬ್ಬೀರ ಕೊಡಗನೂರ, ಸದಸ್ಯರಾದ ಎಸ್.ಜಿ ದ್ಯಾಂಪೂರ, ಗಿರೀಶ ಹಂಪಿಹೊಳಿಮಠ, ಪವಿತ್ರಾ ಪೂಜೇರ, ರಮೇಶ ಬಂದಿಕೇರಿ, ಗೌಡರ, ವಿಮಲಾ ದೊಡ್ಡವಾಡ. ಲಕ್ಷ್ಮಣ ತಳವಾರ, ಸಂಗಮೇಶ ಅಂಗಡಿ, ಶ್ರೀಕಾಂತ ಕೆಂಗಾರ, ಎಚ್.ಎಸ್.ಮಡಿವಾಳರ, ಧನಂಜಯ ಭೋವಿ, ಹವಾಲ್ದಾರ, ಜೋಗೇರ, ಕಲಾ.ಕೆ, ಸೊಪ್ಪಿನ ಸೇರಿದಂತೆ ಇತರರು ಇದ್ದರು.

# ಸಿಎಂ ಸಿದ್ದರಾಮಯ್ಯ ರಾಜಿನಾಮೆಗೆ ಆಗ್ರಹಿಸಿ ಬಿಜೆಪಿಯಿಂದ ಪ್ರತಿಭಟನೆ: ರಾಜಿನಾಮೇ ನೀಡುವರೆಗೂ ಹೋರಾಟ

**ಬಾಗಲಕೋಟೆ :** ಸಿಎಂ ಸಿದ್ದರಾಯ್ಯ ರಾಜಿನಾಮೆ ಆಗ್ರಹಿಸಿ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಘಟಕ ದಿಂದ ನಗರದ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ಜರುಗಿತು.




ಪ್ರತಿಭಟನೆಯನ್ನೂದ್ದೇಶಿಸಿ ಮಾತನಾಡಿದ ಶಾಸಕ ಮಹೇಶ ತೆಂಗಿನಕಾಯಿ ರಾಜ್ಯಪಾಲರಿಗೂ ಗೊಬ್ಯಾಕ್ ಎಮದು ಅವಮಾನ ಮಾಡುವಂತಕ್ಕೆ ಕಾಂಗ್ರೆಸ್ಸಿನವರು ನಡೆದುಕೊಂಡರು, ಆದರೆ ರಾಜ್ಯದ ಉಚ್ಚ ನ್ಯಾಯಾಲಯ ತೀರ್ಪು ರಾಜ್ಯಪಾಲರ ಕ್ರಮ ಸೂಕ್ತವಾಗಿದ್ದು ನ್ಯಾಯದ ಪರಾವಾಗಿದೆ, ತೀರ್ಪಿಗೆ ಗೌರವ ಕೊಟ್ಟ ಕೂಡಲೆ ರಾಜಿನಾಮೆ ನಿಡಬೇಕು, ಇದೂ ಮೂಡಾ ಹಗರಣ ಅಷ್ಟೆ, ವಾಲ್ಮೀಕಿ ಹಗರಣ ಬಾಕಿ ಇದೆ, ನಾವೂ ಪ್ರತಿಭಟಣೆ ಮೂಲಕ ಆಗ್ರಹ ಮಾಡುತ್ತೆವೆ ತೀರ್ಪಿಗೆ ತಲೆ ಬಾಗಿ ಸಿಎಂ ಸ್ಥಾನಕ್ಕೆ ರಾಜಿನಾಮೇ ನೀಡಿ ತನಿಖೆ ಸಹಕರಿಸಿ ಎಂದರು

ಮಾಜಿ ಶಾಸಕ ಡಾ. ವೀರಣ್ಣ ಚರಂತಿಮಠ ಮಾತನಾಡಿ ಸಿದ್ದರಾಮಯ್ಯ ಹಾಗೂ ಇಡಿ ಕಾಂಗ್ರೆಸ್ಸ ಸರಕಾರ ಇದರಲ್ಲಿ ನೇರ ಭಾಗಿಯಾಗಿದೆ, ಇದು ವಯಕ್ತಿತ ಲಾಭಮಾಡಿಕೊಳ್ಳುವ ಕಾಂಗ್ರೆಸ್ಸ ಸರಕಾವಾಗಿದೆ ಇದರಿಂದ ಸಿದ್ದರಾಮಯ್ಯನನವರಿಗೆ ರಾಜಿನಾಮೆ ಅನಿವಾರ್ಯ, ಜನರಪರವಾಗಿ ಆಡಳಿತ ಇಲ್ಲ ಎಂದು ಸಾಬಿತು ಆಗಿದ್ದರಿಂದ ಅನಿವಾರ್ಯವಾಗಿ ನಾವು ಬಿದಿಗಿಳಿದು ಹೋರಾಟಮಾಡುವುದಾಗಿದೆ, ಸಿದ್ದರಾಮಯ್ಯನವರು ಎಲ್ಲಿವರೆಗೂ ರಾಜಿನಾಮೆಕೋಡುವುದಿಲ್ಲವೋಅಲ್ಲಿವರೆಗೆ ಇದು ನೀರಂತರ ಹೋರಾಟ ಇರುತ್ತದೆ, ಆ ನೀಟ್ಟಿನಲ್ಲಿ ಕೂಡಲೆ ರಾಜಿನಾಮೆ ಕೊಡಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ ಹಿಂದೂಳಿದ ವರ್ಗಗಳ ಮುಖ್ಯಮಂತ್ರಿ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ ತೀರ್ಪಿಗೆ ಗೌರವ ಕೋಟ್ಟು ರಾಜಿವನಾಮೆ ಕೊಟ್ಟು ತನಿಖೆಗೆ ಸಹಕರಿಸಿ, ಕಾಂಗ್ರೆಸ್ಸ ಸರಕಾರ ಹಲವಾರು ಸಚಿವರ ಮೇಲೆ ಹಗರಣಗಳು ಬೆಳಕಿಗೆ ಬರುತ್ತಿವೆ, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರ ಮೇಲು ಇಂದು ಹಗರಣ ಬಯಲಾಗುತ್ತಿದೆ, ಇದನೆಲ್ಲವನ್ನೂ ನೋಡಿದರೆ ಈ ಸರಕಾರ ರಾಜ್ಯದಲ್ಲಿ ಬಹಳದಿನ ನಿಲ್ಲೋದಿಲ್ಲಾ ಎಂದರು.

ಪ್ರತಿಭಟನೆಯು ಶಿವಾನಂದ ಜೀನನಿಂದ ಮೇರವಣಿಗೆ ಮೂಲಕ ಬಸವೇಶ್ವರ ವೃತ್ತಕ್ಕೆ ಆಗಮಿಸಿ ಅಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಣೆ ಮಾಡಲಾಯಿತು. ಪ್ರತಿಭಟಣೆಯಲ್ಲಿ ಬಿಜೆಪಿ ಮುಖಂಡರಾದ ಜಿ.ಎನ್.ಪಾಟೀಲ. ಡಾ.ಎಂ.ಎಸ್. ದಡ್ಡೆನ್ನವರ. ಲಕ್ಷ್ಮೀ ನಾರಾಯಣ ಕಾಸಟ ನಗರಸಭೆ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಜ್ಯೋತಿ ಭಜಂತ್ರಿ, ಶಶಿಕಲಾ ಮಜ್ಜಗಿ, ಸುರೇಶ ಕೊಣ್ಣೂರ, ಬಸವರಾಜ ಹುನಗುಂದ,ಶಿವಾನಂದ ಟವಳಿ, ಸತ್ಯನಾರಾಯಣ ಹೆಮಾದ್ರಿ, ರಾಜು ಮುದೇನೂರ, ಮುತ್ತಣ್ಣ ಬೆಣ್ಣೂರ, ಸೇರಿಂದತೆ ಅನೇಕರು ಭಾಗವಹಿಸಿದ್ದರು.

## ಸ್ವಚ್ಛತೆಯ ಪ್ರತೀಕ ಪೌರಕಾರ್ಮಿಕರು: ರಮೇಶ ಜಮಖಂಡಿ



**ಕಮತಗಿ :** ಪಟ್ಟಣದ ಸ್ವಚ್ಛತೆ, ಜನರ ಆರೋಗ್ಯ ಕಾಪಾಡುವ ಜೊತೆ ಪಟ್ಟಣದ ಸೌಂದರ್ಯ ಹೆಚ್ಚಿಸುವುದಕ್ಕೆ ನಿತ್ಯ ಪರಿಶ್ರಮಪಡುವ ಪೌರಕಾರ್ಮಿಕರ ಸೇವೆ ಅಮೂಲ್ಯವಾದದ್ದು ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷ ರಮೇಶ ಜಮಖಂಡಿ ಹೇಳಿದರು.

ಪಟ್ಟಣ ಪಂಚಾಯತಿ ಕಾರ್ಯಾಲಯದ ಆವರಣದಲ್ಲಿ ಪೌರಕಾರ್ಮಿಕರ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ಕ್ರೀಡೆಗಳು ಹಾಗೂ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಪಟ್ಟಣವನ್ನು ಸ್ವಚ್ಛ ಹಾಗೂ ಆರೋಗ್ಯಕರವಾಗಿ ಇಡುವ ನಿಟ್ಟಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ನಿತ್ಯ ಕಾಯಕಯೋಗಿ ಪೌರಕಾರ್ಮಿಕರು ಎಂದರು.

ಸದಸ್ಯ ದೇವಿಪ್ರಸಾದ ನಿಂಬಲಗುಂದಿ ಮಾತನಾಡಿ ಅವರ ಕಾರ್ಮಿಕರು ಪಟ್ಟಣದ ಸ್ವಚ್ಛತೆಯ ಜೊತೆಗೆ ತಮ್ಮ ಮಕ್ಕಳ ಉತ್ತಮ ಶಿಕ್ಷಣ, ಆರೋಗ್ಯದತ್ತ ಚಿತ್ತಹರಿಸಬೇಕು ಎಂದು ತಿಳಿಸಿದರು.

ಪ.ಪಂ. ಮುಖ್ಯ ಅಧಿಕಾರಿ ಮಾತನಾಡಿ ಮಹಾತ್ಮ ಗಾಂಧೀಜಿಯವರ ಸ್ವಚ್ಛತೆಯ ಕನಸು ನನಸಾಗ ಬೇಕಾದರೆ ಪೌರಕಾರ್ಮಿಕರ ಸೇವೆಯು ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ಸದಸ್ಯರಾದ ಬಸವರಾಜ ಕುಂಬಳಾವತಿ, ಲಕ್ಷ್ಮಣ ಮಾದರ, ಚಂದು ಕುರಿ, ಶ್ರೀಮತಿ ನಂದಾ ಲಕ್ಷ್ಮಣ ದ್ಯಾಮಣ್ಣವರ ಸೇರಿದಂತೆ ಸಿಬ್ಬಂದಿ ವರ್ಗ ಹಾಜರಿದ್ದರು.

### ಅಮೀನಗಡದಲ್ಲಿ ಬಿಜೆಪಿ ಮಹಾಸದಸ್ಯತಾ ಅಭಿಯಾನ

## ನ್ಯಾಯಾಲಯದ ತೀರ್ಪು ನ್ಯಾಯದ ಪರವಾಗಿದ್ದು ಸ್ವಾಗತಾರ್ಹ: ತೀರ್ಪನ್ನು ಗೌರವಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಿನಾಮೆ ನೀಡಲಿ: ಡಾ.ವೀರಣ್ಣ ಚರಂತಿಮಠ

**ಅಮೀನಗಡ :** ನ್ಯಾಯಾಲಯದ ಮುಂದೆ ಎಲ್ಲರೂ ಸಮಾನರು ಎಂಬ ತತ್ವವನ್ನು ಇಂದು ಹೈಕೋರ್ಟ ಎತ್ತಿ ಹಿಡಿದಿದ್ದು, ತೀರ್ಪು ನ್ಯಾಯದ ಪರವಾಗಿದ್ದು ಸ್ವಾಗತಾರ್ಹವಾಗಿದೆ, ನ್ಯಾಯಾಲಯದ ತೀರ್ಪನ್ನು ಗೌವರವಿಸಿ ನೈತಿಕ ಹೊಣೆ ಹೋತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಿನಾಮೆ ನೀಡಿ ತನಿಖೆಗೆ ಸಹಕರಿಸಲಿ ಎಂದು ಡಾ.ವೀರಣ್ಣ ಚರಂತಿಮಠ ಅವರು ಹೇಳಿದರು.




ಅವರು ಭಾರತೀಯ ಜನತಾ ಪಾರ್ಟಿ, ಬಾಗಲಕೋಟ ವಿಧಾನಸಭಾ ಮತಕ್ಷೇತ್ರದ ಗ್ರಾಮೀಣ ಮಂಡಲವತಿಯಿಂದ ಮಂಗಳವಾರ ಅಮೀನಗಡ ಪಟ್ಟಣದಲ್ಲಿ ಹಮ್ಮಿಕೊಂಡ ಬಿಜೆಪಿ ಮಹಾಸದಸ್ಯತಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದು ಹೈಕೋರ್ಟ ನೀಡಿದ ತೀರ್ಪು ನ್ಯಾಯಾಲಯದ ಮುಂದೆ ಎಲ್ಲರೂ ಸಮಾನರು ಎಂಬುದನ್ನು ಮತ್ತೊಮ್ಮೆ ಎತ್ತಿಹಿಡಿದಿದೆ, ಸಿದ್ದರಾಮಯ್ಯನವರ ಅರ್ಜಿಯನ್ನು ವಜಾಮಾಡಿದ ರಾಜ್ಯ ಉಚ್ಚನ್ಯಾಯಾಲಯ ರಾಜ್ಯಪಾಲರ ಕೊಟ್ಟಿದ್ದ ಪ್ರಾಸಿಕ್ಯೂಶೇನ್‌ಗೆ ಅನುಮತಿ ನೀಡಿದ್ದು, ಅದು ಕಾನೂನ ಬದ್ದವಾಗಿದೆ ಎಂಬ ಅಂಶವನ್ನು ರಾಜ್ಯ ಉಚ್ಚನ್ಯಾಯಾಲಯ ಹೇಳಿದೆ, ಪ್ರಮುಖವಾಗಿ ನ್ಯಾಯಾಧೀಶರು ಉಲ್ಲೇಖ ಮಾಡಿರುವುದು ಕಾನೂನಿನ ಎದರೂ ಎಲ್ಲರು ಒಂದೆ ಅನ್ನುವ ಅಂಶವನ್ನು ರಾಜ್ಯ ಉಚ್ಚನ್ಯಾಯಾಲಯ ಹೇಳಿರುವಂತದ್ದು ಈ ಉಚ್ಚ ನ್ಯಾಲಾಯದ ತಿರ್ಪನ್ನು ಗೌರವಿಸಿ ಮಾನ್ಯ ಮುಖ್ಯಂತ್ರಿಗಳು ರಾಜಿನಾಮೆ ನೀಡ ತನಿಖೆಗೆ ಸಹಕರಿಸಲಿ ಎಂದು ಒತ್ತಾಯಿಸಿದರು, ಈ ಹಗರಣ ವಿರುದ್ದ ಬಿಜೆಪಿ ಪಾದಯಾತ್ರೆಮಾಡಿ ಜನರಲ್ಲಿ ಜಾಗೃತಿ ಮೂಡಿಸಿತ್ತು ಇಂದು ಅದಕ್ಕೆ ನ್ಯಾಯ ಸಿಕ್ಕಿದೆ ಎಂದರಲ್ಲದೆ ಮಹಾಸದಸ್ಯತಾ ಅಭಿಯಾನ ನಗರ ಹಾಗೂ ಗ್ರಾಮೀಣ ಭಾಗದಲ್ಲಿ 80ಸಾವಿರಕ್ಕಿಂತ ಹೆಚ್ಚು ಸದಸ್ಯರನ್ನು ನೊಂದಾಯಿಸುವ ಮೂಲಕ ದಾಖಲೆ ಮಾಡಬೇಕು ಎಂದರು.

ಮುಖಂಡರಾದ ಡಾ.ಎಂ.ಎಸ್. ದಡ್ಡೆನ್ನವರ ಮಾತನಾಡಿ ಇಂದು ದೇಶದಲ್ಲಿ ಮೋದಿಯಿಂದಾಗಿ ದೇಶ ಸುಭದ್ರವಾಗಿದೆ, ದೇಶದ ಸರ್ವಾಂಗಿಣ ಅಭಿವೃದ್ಧಿಗೆ ಬಿಜೆಪಿ ಆಡಳಿತ ಅವಶ್ಯಕವಾಗಿದ್ದೆ, ದೇಶದ ಅಭಿವೃದ್ಧಿಗೋಸ್ಕರ ಬಿಜೆಪಿ ಸದಸ್ಯರಾಗಿ ಶಕ್ತಿ ತುಂಬಬೇಕಿದೆ ಎಂದರು.

ಪ್ರಸ್ತಾವಿಕ ಮಾತನಾಡಿದ ಅಭಿಯಾನದ ಪ್ರಭಾರಿ ಶಂಕರ ಹುನೂರ, ಅಭಿಯಾನದ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ರಾಜು ಮುದೇನೂರ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣುರು, ಮಲ್ಲೇಶ ವಿಜಾಪುರ, ಕಲ್ಲಪ್ಪ ಭಗವತಿ, ಪಟ್ಟಣ ಪಂಚಾಯತ ಉಪಾಧ್ಯಕ್ಷೆ ಉಮಾಶ್ರೀ ಹಣಗಿ, ಲಕ್ಷ್ಮಣ ತಳವಾರ, ವಿಜಯಕುಮಾರ ಕೊಣ್ಣುರ, ಯಮನಪ್ಪ ಕತ್ತಿ, ಸಂತೋಷ ಐಹೊಳೆ, ಬಸವರಾಜ ಬೇವೂರ, ಗುರುನಾಥ ಚಳ್ಳಮರದ,ಪುಷ್ಪಾ ಮುಳ್ಳೂರ, ಸುಜಾತಾ ತತ್ರಾಣಿ, ಜ್ಯೋತಿ ತುಂಬಗಿ,ಸಂಗಪ್ಪ ತಳವಾರ, ಮುಂಡಲಿಕ್ಕಪ್ಪ ಮೂಲಿಮನಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಪಟಾಕಿ ಸುಟ್ಟ ಮರುದಿನ ಕಸದ ರಾಶಿ

## ಟ್ರ್ಯಾಕ್ಟರ್ನ ಮೂರು ಟ್ರ್ಯಾಲಿಯಷ್ಟು ಸುಟ್ಟ ಪಟಾಕಿ ಕಾಗದದ ಚೂರುಗಳು

**ಬನಹಟ್ಟಿ :** ಇಲ್ಲಿಯ ಕಾಡಸಿದ್ಧೇಶ್ವರ ಜಾತ್ರೆಯ ನಿಮಿತ್ಯ ಸಪ್ಟೆಂಬರ 24 ರಂದು ಬನಹಟ್ಟಿ ಮಂಗಳವಾರ ಪೇಟೆ ರಸ್ತೆಯಲ್ಲಿ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 11 ರವರೆಗೂ ಸಾವಿರಾರು ಭಕ್ತರು ಒಂದು ಕೋಟಿಗೂ ಅಧಿಕ ಬೆಲೆಯ ಮದ್ದು ಸುಟ್ಟರು. ಇದು ಶತಮಾನಗಳಿಂದ ನಡೆದು ಬಂದ ವಾಡಿಕೆ. ಆದರೆ ಇದರಿಂದ ನಿಧಾನವಾಗಿ ಮಾಲಿನ್ಯ ಉಂಟಾಗುತ್ತಿರುವುದು ಮಾತ್ರ ಖಚಿತ ಎಂದು ಪ್ರಜ್ಞಾವಂತರ ಅಭಿಪ್ರಾಯವಾಗಿದೆ. ನಗರದ ಮಂಗಳವಾರ ಪೇಟೆಯ ವೃತ್ತದಿಂದ ಗಾಂಧಿವೃತ್ತ, ವೀರಭದ್ರೇಶ್ವರ ಲೇನ್ದವರೆಗೆ ವಾಸಿಸುವ ಅನೇಕ ಕುಟುಂಬಗಳು ಈ ಪಟಾಕಿಯ ಸದ್ದು ಹಾಗೂ ಹೊಗೆಯಿಂದ ಬೇಸತ್ತು ತಮ್ಮ ತಮ್ಮ ಮನೆ ಬಾಗಿಲು ಹಾಕಿರುತ್ತಾರೆ. ಹೊರಗಡೆ ನಡೆಯುವ ಜಾತ್ರೆಯ ಸಂಭ್ರಮ ಇವರ ಪಾಲಿಗೆ ಮಾತ್ರ ಬರೀ ಹೊಗೆ.





ಅನೇಕ ಅಧಿಕಾರಿಗಳು ಈ ಪಟಾಕಿ ಸುಡುವುದನ್ನು ನಿಲ್ಲಸಬೇಕೆಂದು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಆದರೆ ಭಕ್ತರು ತಮ್ಮ ಇಷ್ಟಾರ್ಥಕ್ಕಾಗಿ ಪಟಾಕಿ ಸಿಡಿಸುವುದು ವಾಡಿಕೆಯಾಗಿದೆ. ಧಾರ್ಮಿಕತೆಗೆ ಧಕ್ಕೆ ಬಾರದಿರಲಿ ಎಂಬ ಸದುದ್ದೇಶದಿಂದ ಕೆಲವು ಅಧಿಕಾರಿಗಳು ಮೌನರಾಗಿದ್ದಾರೆಂದು ಹೇಳಲಾಗುತ್ತಿದೆ.

ಪಟಾಕಿ ಸುಡುವ ಸಂದರ್ಭದಲ್ಲಿ ಅನೇಕರಿಗೆ ಗಂಭೀರವಾದ ಗಾಯಗಳಾಗುತ್ತಿವೆ. ಕೆಲವೊಂದು ಅಂಗಡಿಗಳಿಗೆ ಬೆಂಕಿ ಕೂಡಾ ತಗುಲಿ ಸುಡುವ ಹಂತದಲ್ಲಿದ್ದ ಘಟನೆಗಳು ಜರುಗಿವೆ. ಪಟಾಕಿ ಶಬ್ದದ ಅಬ್ಬರಕ್ಕೆ ನಾಯಿ, ದನಕರುಗಳು ಬಲು ದೂರ ಹೋಗಿರುತ್ತವೆ. ಅನೇಕ ಪಕ್ಷಿಗಳು ಪಟಾಕಿಯ ಭಯಂಕರ ಶಬ್ದಕ್ಕೆ ಹೃದಯ ಸ್ಥಂಬನವಾಗಿ ಸಾವನ್ನಪ್ಪುತ್ತವೆ. ಆದರೂ ಭಕ್ತರು ಈ ರೀತಿ ಪಟಾಕಿ ಸುಡುತ್ತಾರೆ. ಜಾತ್ರಾ ಕಮೀಟಿಯವರು, ಪೊಲೀಸರು, ಅಗ್ನಿಶಾಮಕ ದಳದವರು ಅನೇಕ ಪೂರ್ವ ಸಿದ್ದತೆ ಮಾಡಿಕೊಂಡು ಹಾನಿಗಳಾಗದಂತೆ ಎಚ್ಚರಿಕೆ ವಹಿಸುತ್ತಾರೆ.

ಮೂರು ಟ್ರ್ಯಾಲಿ ಕಾಗದ: ಸುಟ್ಟ ಪಟಾಕಿಗಳ ಮದ್ದಿನ ಕಾಗದದ ಚೂರುಗಳು ಮೂರು ಟ್ರ್ಯಾಕ್ಟರ್ನ ಟ್ರ್ಯಾಲಿಗಳಷ್ಟು ರಸ್ತೆ ಮೇಲೆ ಬಿದ್ದಿರುವುದನ್ನು ಸ್ವತಃ ಪೌರಾಯುಕ್ತ ಜಗದೀಶ ಈಟಿ ರಸ್ತೆಗಳಿದು ನೂರಾರು ಸಿಬ್ಬಂದಿಗಳಿಂದ ಸ್ವಚ್ಛತೆಯಲ್ಲಿ ಭಾಗಿಯಾಗಿದ್ದರು.

## ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಿ



**ರಬಕವಿ-ಬನಹಟ್ಟಿ :** ಸರ್ಕಾರಿ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಸರಕಾರ ಉಚಿತವಾಗಿ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದೆ. ಈ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿಗಳು ಪೌಷ್ಠಿಕ ಆಹಾರದ ಕೊರತೆಯಿಂದ ಬಳಲಬಾರದು ಎಂಬ ಉದ್ದೇಶದಿಂದ ಅಜೀಜ್ ಪ್ರೇಮಜಿ ಫೌಂಢೇಶನ್ ಆಶ್ರಯದಲ್ಲಿ ವಾರದಲ್ಲಿ ಆರು ದಿನಗಳ ಕಾಲ ಪೂರಕ ಪೌಷ್ಠಿಕ ಆಹಾರವನ್ನು ನೀಡುತ್ತಿರುವುದು ಶ್ಲಾಘನೀಯವಾದ ಕಾರ್ಯವಾಗಿದೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಬುಧವಾರ ಸಮೀಪದ ಯಲ್ಲಟ್ಟಿಯ ಸರ್ಕಾರಿ ಪ್ರೌಢ ಶಾಲೆಯ ಆಶ್ರಯದಲ್ಲಿ ನಡೆದ ಪೂರಕ ಪೌಷ್ಠಿಕ ಆಹಾರ ವಿತರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಅರ್ಹತೆಯ ಆಧಾರದ ಮೇಲೆ ಶಿಕ್ಷಕರನ್ನು ಆಯ್ಕೆ ಮಾಡಿದರೂ ಸರ್ಕಾರಿ ಶಾಲೆಗಳಲ್ಲಿಯ ವಿದ್ಯಾರ್ಥಿಗಳು ಫಲಿತಾಂಶದಲ್ಲಿ ಹಿಂದೆ ಬೀಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಇಲಾಖೆಯ ಅಧಿಕಾರಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಗಮನ ನೀಡಬೇಕು ಎಂದು ಶಾಸಕ ಸವದಿ ತಿಳಿಸಿದರು.

ಬಾಗಲಕೋಟೆ ಡಿಡಿಪಿಐ ಎಂ. ವಿವೇಕಾನಂದ ಮಾತನಾಡಿ, ಅಜೀಜ್ ಪ್ರೇಮಜಿಯವರ ಈ ಯೋಜನೆಯಿಂದ ಮಕ್ಕಳಲ್ಲಿ ಪೌಷ್ಠಿಕ ಆಹಾರ ದೊರೆಯುವುದರ ಜೊತೆಗೆ ವಿದ್ಯಾರ್ಥಿಗಳ ಹಾಜರಾತಿ ಹೆಚ್ಚಾಗುತ್ತದೆ ಮತ್ತು ಕಲಿಕೆಯ ಗುಣಮಟ್ಟ ಕೂಡಾ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳು ಸರ್ಕಾರ ನೀಡಿದ ಸೌಲಭ್ಯಗಳನ್ನು ಪಡೆದುಕೊಂಡು ಮುಂದಿನ ದಿನಗಳಲ್ಲಿ ಉತ್ತಮ ಪ್ರಜೆಗಳಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸನ್ನವರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಲ್ಲಪ್ಪ ಪಾಟೀಲ, ಅಶೋಕ ಕಿತ್ತೂರ, ಮಹಾದೇವಪ್ಪ ಮೋಪಗಾರ, ದಯಾನಂದ ಯಾವಗಲ್, ಸಿ. ಎಸ್. ಕಲ್ಯಾಣಿ, ಕಾಡೇಶ ಕೋಲೂರ, ಬಾಬಾಗೌಡ ಪಾಟೀಲ, ಅರ್ಜುನ ಕಾಖಂಡಕಿ, ಬಿ. ಎಸ್. ಜಮಖಂಡಿ, ರವೀಂದ್ರ ಸಂಪಗಾಂವಿ, ಮುಖ್ಯ ಶಿಕ್ಷಕ ಎಸ್. ಆರ್. ಮರೆಗುದ್ದಿ ಸೇರಿದಂತೆ ವಿವಿಧ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

# ಪ್ರಚಾರಕ್ಕೆ ಜಾತ್ರೆಯೇ ಅಖಾಡಾ...!

## ಜಾಹೀರಾತುಗಳಿಗಿಲ್ಲ 'ಮೂಗುದಾರ' । ಬನಹಟ್ಟಿಯಲ್ಲಿ 'ಬ್ಯಾನರ್ಗಳದೇ ಜಾತ್ರೆ'..!





**ರಬಕವಿ-ಬನಹಟ್ಟಿ :** ಧಾರ್ಮಿಕತೆಯನ್ನು ಬಿಂಬಿಸುವ ಬದಲಾಗಿ ಇತ್ತೀಚೆಗೆ ಬ್ಯಾನರ್ಗಳ ಜಾತ್ರೆಗಳಾಗುತ್ತಿರುವದು ನಿಜಕ್ಕೂ ಶೋಚನೀಯ ಸಂಗತಿ. ಬನಹಟ್ಟಿ ನಗರ ಪ್ರವೇಶ ಮಾಡಿದರೆ ಸಾಕು, ರಸ್ತೆಯ ಬದಿಯಲ್ಲೆಲ್ಲಾ ಬ್ಯಾನರ್ಗಳದ್ದೇ ಕಾರುಬಾರು. ಕೆಲವು ಪ್ರದೇಶಗಳಲ್ಲಿ ಸಂಚರಿಸಬೇಕಾದರೆ ರಸ್ತೆಯ ಮೇಲಿನ ಮುಳ್ಳಿನ ಕಂಟಿಗಳಂತೆ, ಬ್ಯಾನರ್ಗಳನ್ನು ನೂಕಿಯೇ ಪ್ರವೇಶ ಮಾಡಬೇಕು. ಅಷ್ಟೊಂದು ಪ್ರಮಾಣದಲ್ಲಿ ಬ್ಯಾನರ್ಗಳು ನಗರಾದ್ಯಂತ ಪ್ರದರ್ಶನಗೊಳ್ಳುತ್ತಿವೆ. ಜಾತ್ರೆಯೇ ಪ್ರಚಾರದ ಅಖಾಡಾವಾಗಿ ಮಾರ್ಪಟ್ಟಿದೆ.

ಹೌದು, ಅವಳಿ ನಗರದಾದ್ಯಂತ ಈಗ ಬ್ಯಾನರ್ಗಳದ್ದೇ ಕಾರುಬಾರು. ರಾಜಕೀಯ ಮುಖಂಡರಿಗಂತೂ ಪುಕ್ಕಟ್ಟೆ ಪ್ರಚಾರದ ನೆಪದಲ್ಲಿ ಪರಿಸರಕ್ಕಾಗುವ ಮಾಲಿನ್ಯವನ್ನೂ ಗಮನಿಸದೆ ನಾಯಿ ಕೊಡೆಗಳಂತೆ ನಗರದ ತುಂಬೆಲ್ಲಾ ಎಲ್ಲೆಂದರಲ್ಲಿ ಬೇಕಾಬಿಟ್ಟಿ ಜಾಹೀರಾತುಗಳನ್ನು ಅಂಟಿಸುತ್ತ ನಗರ ಸೌಂದರ್ಯಕ್ಕೆ ಧಕ್ಕೆ ತರುವಂತಹ ಕಾರ್ಯದಲ್ಲಿ ತೊಡಗಿರುವದು ವಿಷಾದದ ಸಂಗತಿಯಾಗಿದೆ.

ಈಗಷ್ಟೇ ಬನಹಟ್ಟಿಯ ಆರಾಧ್ಯ ದೈವ ಶ್ರೀ ಕಾಡಸಿದ್ಧೇಶ್ವರ ಜಾತ್ರೆ ನಡೆಯುತ್ತಿದ್ದು, ಜಾತ್ರೆಗೆ ಬೇಕಾದ ಪ್ರಮುಖ ಅಂಶಗಳು ಬದಿಗೊತ್ತಿ ಬರೀ ಎಲ್ಲೆಂದರಲ್ಲಿ ಜಾಹೀರಾತು, ಬ್ಯಾನರ್ಗಳೇ ಕಾಣುತ್ತಿರುವದರಿಂದ ಜಾತ್ರೆಯು ವಿಶೇಷ ರಮಣೀಯವೆನಿಸುವಲ್ಲಿ ವಿಫಲಗೊಳ್ಳುತ್ತಿದೆ. ಇತಿಹಾಸ ಕಾಲದಿಂದ ಆಧ್ಯಾತ್ಮಿಕ, ಧಾರ್ಮಿಕ ಹಾಗು ಸಾಂಸ್ಕೃತಿಕ ಮೆರಗಿಗೆ ಜಾತ್ರೆಯ ವೈಶಿಷ್ಟ್ಯತೆಯನ್ನು ನೋಡಲು ಆಗಮಿಸುವ ಭಕ್ತರಿಗೆ ಕೇವಲ ರಾಜಕಾರಣಿಗಳ ಭಾವಚಿತ್ರದ ಫಲಕಗಳು ಬೇಸರಗೊಳ್ಳುತ್ತಿವೆ.

> **'ನಗರಾದ್ಯಂತವಿರುವ ಬ್ಯಾನರ್, ಬಂಟಿಂಗ್ಸಗಳನ್ನು ಗಮನಿಸಲಾಗಿದೆ. ಪರವಾನಿಗೆ ಪಡೆಯದ ವ್ಯಕ್ತಿಗಳಿಗೆ ನೋಟಿಸ್ ನೀಡಿ, ತೆರಿಗೆ ತುಂಬಲು ದಂಡ ಸಹಿತ ವಸೂಲಿ ಮಾಡಲಾಗುವದು. ಯಾರೂ ಪರವಾನಿಗೆಯಿಲ್ಲದೆ ಬ್ಯಾನರ್ ಕಟ್ಟುವಂತಿಲ್ಲ.'**
> । ಜಗದೀಶ ಈಟಿ
> ಪೌರಾಯುಕ್ತರು, ನಗರಸಭೆ.

ತೆರಿಗೆ ತುಂಬದೆ ಬೇಕಾಬಿಟ್ಟಿ ಪ್ರಚಾರ: ನಗರಸಭೆಯಲ್ಲಿ ಕಳೆದ 2012 ಏಪ್ರಿಲ್ನಲ್ಲಿನ ಸಾಮಾನ್ಯ ಸಭೆಯಲ್ಲಿ ಮಹತ್ವದ ನಿರ್ಣಯವನ್ನು ಕೈಗೊಂಡು ಅವಳಿ ನಗರದಾದ್ಯಂತ ಯಾವದೇ ಕಾರಣಕ್ಕೂ ಅಕ್ರಮವಾಗಿ ಬ್ಯಾನರ್, ಬಂಟಿಂಗ್ಸ ಹಾಗು ಕಟೌಟ್ಗಳನ್ನು ಅಳವಡಿಸಬಾರದು ಎಂದು ಸಭೆಯು ಕಟ್ಟಾಜ್ಞೆ ಹೊರಡಿಸಿತು. ನಂತರದ ಕೆಲವು ದಿನಗಳಿಂದ ಚಾಚೂ ತಪ್ಪದೆ ಪಾಲಿಸಿದ ನಗರಸಭೆಯು ಯಶಸ್ಸು ಕಂಡಿತ್ತು. ಇದೀಗ ಜಾತ್ರೆಗಳಲ್ಲಿ ವಿನಾಕಾರಣ ರಾಜಕೀಯ ಪ್ರಚಾರಗಿಟ್ಟಿಸಿಕೊಳ್ಳುತ್ತಿರುವ ರಾಜಕಾರಣಿಗಳಿಗೆ 'ಮೂಗುದಾರ' ಹಾಕುವಲ್ಲಿ ನಗರಸಭೆ ಪಾರದರ್ಶಕತೆಯಿಂದ ಸಜ್ಜಾಗಬೇಕಾಗಿದೆ.

ನಗರಸಭೆ ಬೊಕ್ಕಸಕ್ಕೆ ಹಾನಿ: ಅಕ್ರಮ ಫಲಕಗಳನ್ನು ಹಾಕುವ ಮೂಲಕ ಚದರ ಅಡಿಗೆ ಸೀಮಿತಗೊಳಿಸಿರುವ ಬೆಲೆಯನ್ನು ನಗರಸಭೆಗೆ ಭರಣಾ ಮಾಡದ ಕಾರಣ ಲಕ್ಷಾಂತರ ರೂ. ನಗರಸಭೆ ಬೊಕ್ಕಸಕ್ಕೆ ಹಾನಿಯುಂಟಾಗಲು ಕಾರಣವಾಗಿದೆ.

## ಸಿದ್ರಾಮಯ್ಯ ರಾಜೀನಾಮೆ ಪ್ರಶ್ನೆಯೇ ಇಲ್ಲ-ಕೊಣ್ಣೂರ

**ರಬಕವಿ-ಬನಹಟ್ಟಿ :** ಸಿದ್ರಾಮಂ ಯ್ಯನವರು ರಾಜೀನಾಮೆನೀಡುವ ಪ್ರಶ್ನೆಯೇ ಇಲ್ಲವೆಂದು ತೇರದಾಳ ಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಸಮರ್ಥಿಸಿಕೊಂಡರು.



ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂಡಾ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪಿನ ನಂತರ ಮೂಡಾ ಪ್ರಕರಣದಲ್ಲಿ ಕಾಂಗ್ರೆಸ್ ಹಿನ್ನಡೆಯಾದ ನಂತರ ಪ್ರತಿಕ್ರಿಯಿಸಿದ ಕೊಣ್ಣೂರ, ಇಡೀ ರಾಜ್ಯದ ಜನತೆ ಗ್ಯಾರಂಟಿಗಳ ಆಶೀರ್ವಾದದಿಂದ ಬೆಂಬಲಕ್ಕೆ ನಿಂತಿದೆ.

ರಾಜೀನಾಮೆ ಪ್ರಶ್ನೆಯೇ ಇಲ್ಲ. ಸಿದ್ರಾಮಯ್ಯ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ಜನಪರ ಕಾರ್ಯಕ್ರಮಗಳನ್ನು ಸಹಿಸಲು ಬಿಜೆಪಿಗೆ ಸಾಧ್ಯವಾಗುತ್ತಿಲ್ಲ.

ಬಿಜೆಪಿಯನ್ನು ವಿರೋಧಿಸುವ ದೇಶದ ಎಲ್ಲಾ ರಾಜಕಾರಣಿಗಳ ವಿರುದ್ಧ ರಾಜಕೀಯ ಷಡ್ಯಂತ್ರ ನಡೆಯುತ್ತಿದೆ.

ನಾವು ಸಿಎಂ ಸಿದ್ರಾಮಯ್ಯ ಜೊತೆಯಲ್ಲಿ ನಿಲ್ಲುತ್ತೇವೆ. ಅವರು ಕರ್ನಾಟಕದಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆಂದು ಕೊಣ್ಣೂರ ಹೇಳಿದರು.

ಬಿಜೆಪಿಗೆ ನ್ಯಾಯಯುತ ವಾದ ಹಾಗು ಹಗರಣಗಳು ದೊರಕದ ಕಾರಣ ಇಂತಹ ಕುತಂತ್ರಗಳಿಂದ ಸರ್ಕಾರದ ವಿರುದ್ಧ ತಂತ್ರಗಾರಿಕೆ ಹೆಣೆಯುತ್ತಿರುವದು ನಡೆಯದೆಂದರು.

# ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರ ದಿನಾಚರಣೆ: ಶೈಕ್ಷಣಿಕ ಕಾರ್ಯಾಗಾರ



**ಧಾರವಾಡ :** ಸೋಮವಾರ ಮುಂಜಾನೆ 10.30ಕ್ಕೆ ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಹಾಗೂ ಧಾರವಾಡ ಜಿಲ್ಲಾ ಪ್ರಾಚಾರ್ಯರ ಸಂಘದ ಆಶ್ರಯದಲ್ಲಿ ಬಿ.ವ್ಹಿ.ಬಿಯ ಬಯೋಟಿಕ್ ಹಾಲಿನಲ್ಲಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು ಮತ್ತು ಉಪನ್ಯಾಸಕರು ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರ ಜನ್ಮದಿನೋತ್ಸವವನ್ನು ಆಚರಿಸುವುದರ ಮೂಲಕ ಶೈಕ್ಷಣಿಕ ಕಾರ್ಯಾಗಾರವನ್ನು ನಡೆಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ವಿಧಾನ ಪರಿಷತ್ ಶಾಸಕರಾದ ಶ್ರೀ. ಎಸ್. ವಿ. ಸಂಕನೂರ ರವರು ಜ್ಯೋತಿ ಬೆಳಗುವುದರೊಂದಿಗೆ ಶಿಕ್ಷಕರ ಕಾರ್ಯವಿಧಾನವನ್ನು ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಕರ ಕ್ರೀಯಾಶೀಲತೆ ಅವಶ್ಯಕತೆ ಎಂಬುವುದರ ಮೂಲಕ ಅನೇಕ ರಾಷ್ಟ್ರಗಳ ಶಿಕ್ಷಕರ ಸ್ಥಾನಮಾನಗಳ ಉದಾಹರಣೆಯೊಂದಿಗೆ ನಮ್ಮನ್ನು ಹೋಲಿಸಿಕೊಂಡರು. ಅಲ್ಲದೇ ಹೆಚ್ಚು ಫಲಿತಾಂಶವನ್ನು ನೀಡುವುದರ ಮೂಲಕವಾಗಿ ಸಮುದಾಯದ ಋಣವನ್ನು ತೀರಿಸಬೇಕೆಂಬುವುದನ್ನು ವಿವರಿಸಿದರು.

ಶ್ರೀ ಹಿರೇಮಲ್ಲೂರು ಈಶ್ವರನ್ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶಶಿಧರ್ ತೋಡಕರ್‌ರವರು ಉಪನ್ಯಾಸ ನೀಡುತ್ತಾ ಶಿಕ್ಷಕರ ಮಹತ್ವ, ಬದ್ಧತೆ, ಸಮಯ ಪಾಲನೆ, ಪಠ್ಯೇತರ ಆಲೋಚನೆಗಳು ಮುಂತಾದ ವಿಷಯಗಳು ಸಮಗ್ರ ಅಭಿವೃದ್ಧಿಗೆ ಸಹಾಯಕವಾಗಿವೆ ಎಂದರು.

ಉಪನಿರ್ದೇಶಕರಾದ ಕೆ. ಪಿ. ಸುರೇಶ ಅಧ್ಯಕ್ಷೀಯ ಸಮಾರೋಪದ ಮಾತುಗಳಲ್ಲಿ ಎಲ್ಲ ಪ್ರಾಚಾರ್ಯರನ್ನು ಮತ್ತು ಉಪನ್ಯಾಸಕರನ್ನು ಎಚ್ಚರಿಸುವುದರ ಜೊತೆಗೆ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಫಲಿತಾಂಶ ಸುಧಾರಣೆಗೆ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಪಾಲ್ಗೊಳ್ಳವುಕೆ ಅನಿವಾರ್ಯ ಎಂಬುದನ್ನು ತಿಳಿಸಕೊಟ್ಟರು.

ಪ್ರಾರಂಭದಲ್ಲಿ ಪಿ.ಸಿ.ಜಾಬಿನ ಕಾಲೇಜಿನ ವಿದ್ಯಾರ್ಥಿನಿಯರು ಪ್ರಾರ್ಥನೆಯನ್ನು ಸಲ್ಲಿಸಿದರು, ಶ್ರೀಮತಿ ಶೋಭಾ ಜಾಬಿನ್ ಭಕ್ತಿಗೀತೆ ಮತ್ತು ನಾಡಗೀತೆಯನ್ನು ಹಾಡಿದರು. ಪ್ರಾಚಾರ್ಯರ ಸಂಘದ ಅಧ್ಯಕ್ಷರಾದ ಶ್ರೀ. ಡಿ. ಹನಮಂತಪ್ಪ ಸ್ವಾಗತಿಸಿದರು, ಕಾರ್ಯದರ್ಶಿಗಳಾದ ಶ್ರೀ. ಸಂದೀಪ ಬೂದಿಹಾಳರವರು ಪರಿಚಯ ಮತ್ತು ಪ್ರಾಸ್ತಾವಿಕ ಮಾತುಗಳನ್ನಾಡಿದರು. ವೇದಿಕೆಯಮೇಲೆ ಪ್ರಾರ್ಚಾರುಗಳಾದ ಶ್ರೀ. ಅಶೋಕ ಸವಣೂರ, ಶಶಿಧರ ತೋಡಕರ್, ವಿ. ಆರ್. ವಾಘ್ಮೋಡೆ, ಶ್ರೀಮತಿ ಟಿ.ಪಿ.ನಾರಾಯಣಕರ್ ಎಸ್. ಶ್ರೀಕಾಂತ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಎಫ್. ಬಿ. ಸೊರಟೂರ, ಮತ್ತು ಅನಂದ ಮುಳಗುಂದರವರು ವಂದನೆಗಳನ್ನು ಸಲ್ಲಿಸಿದರು.

# ಪೌರ ಕಾರ್ಮಿಕರಿಗೆ ಸನ್ಮಾನ



**ಹುಬ್ಬಳ್ಳಿ :** ಪೌರ ಕಾರ್ಮಿಕರ ದಿನಾಚರಣೆ ಅಂಗವಾಗಿ ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ ಅವರು ಪೌರ ಕಾರ್ಮಿಕರರನ್ನು ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವಲ್ಲಿ ಪೌರ ಕಾರ್ಮಿಕರ ಪಾತ್ರ ಬಹುಮುಖ್ಯವಾಗಿದ್ದು,ಪೌರ ಕಾರ್ಮಿಕರ ಹಿತ ಕಾಪಾಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಪೌರ ಕಾರ್ಮಿಕರು ವೈಯಕ್ತಿಕ ಆರೋಗ್ಯಕ್ಕೆ ಗಮನ ಹರಿಸುವ ಜೊತೆಗೆ ನಗರದ ಆರೋಗ್ಯ ಕಾಪಾಡಲು ಒತ್ತು ನೀಡಬೇಕು ಎಂದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿದ್ದು, ಸ್ವಚ್ಛ ಭಾರತ ಅಭಿಯಾನದ ಮೂಲಕ ಬಹುದೊಡ್ಡ ಬದಲಾವಣೆಯನ್ನು ತಂದಿದ್ದಾರೆ . ನಾವೆಲ್ಲರೂ ಮೋದಿ ಅವರು ಕಂಡ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಸ್ವಚ್ಛ ಹುಬ್ಬಳ್ಳಿ–ಸ್ವಾಸ್ಥ್ಯ ಹುಬ್ಬಳ್ಳಿಯನ್ನು ನಿರ್ಮಾಣ ಮಾಡೋಣ ಎಂದರು. ಈ ಸಂದರ್ಭದಲ್ಲಿ ಹಿರಿಯರಾದ ಡಾ. ಹಿರೇಗೌಡರ,ಬಿರವಳ್ಳಿ, ಕುರಣಗಿ, ವಿಶ್ವನಾಥ ಅಂಗಡಿ, ದೋತ್ರದ,ಪ್ರಮುಖರಾದಚೇತನಭಾರದ್ವಾಡ,ಪ್ರವೀಣ ಪವಾರ, ವಿಜಯ ಬಾಕಳೆ, ಸಾಯಿನಾಥ ಧಲಬಂಜನ ಹಾಗೂ ಇತರರು ಉಪಸ್ಥಿತರಿದ್ದರು.

# ಮಹಾತ್ಮಾ ಗಾಂಧೀಜಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರೀಜಿ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ನಿರ್ಧಾರ



**ಧಾರವಾಡ :** ಜಿಲ್ಲಾಡಳಿತದಿಂದ ಅಕ್ಟೋಬರ್ 2 ರಂದು ಮಹಾತ್ಮಾ ಗಾಂಧೀಜಿ ಹಾಗೂ ಲಾಲ್‌ಬಹಾದ್ದೂರ ಶಾಸ್ತ್ರಿಜಿಯವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವ ಬಗ್ಗೆ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರ ಅಧ್ಯಕ್ಷತೆಯಲ್ಲಿ ಇಂದು (ಸೆ.23) ರಂದು ಜರುಗಿದ ಸಭೆಯಲ್ಲಿ ನಿರ್ಧರಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿ ಶಾಂತಿ ಪ್ರತಿಷ್ಠಾನ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಅಕ್ಟೋಬರ್ 2 ರಂದು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಎಲ್ಲ ಅಧಿಕಾರಿಗಳು ತಮಗೆ ಸೂಚಿಸಿದ ಕಾರ್ಯಗಳನ್ನು ತಪ್ಪದೇ ನಿರ್ವಹಿಸುವಂತೆ ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.

ಅ.2 ರಂದು ಬೆಳಿಗ್ಗೆ 9 ಗಂಟೆ–ಗೆ ಜಿಲ್ಲಾಡಳಿತದ ಆವರಣದಲ್ಲಿರುವ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು. ನಂತರ 9.30 ಗಂಟೆಗೆ ಆಲೂರು ವೆಂಕಟರಾವ್ ಭವನದಲ್ಲಿ ವಿವಿಧ ಕಾರ್ಯಕ್ರಮಗಳು ಜರುಗಲಿದ್ದು, ಕಾರ್ಮಿಕ ಇಲಾಖೆಯ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಕಾರ್ಯಕ್ರಮದಲ್ಲಿ ಗಾಂಧೀ ಭಜನೆ ಹಾಗೂ ಸರ್ವಧರ್ಮ ಪ್ರಾರ್ಥನೆ ನಡೆಸಲಾಗುವುದು. ಗಾಂಧಿವಾದಿ ಡಾ. ಸಂಜೀವ ಕುಲಕರ್ಣಿ ಅವರಿಂದ ಗಾಂಧಿವಿಚಾರಧಾರೆ ಕುರಿತು ಉಪನ್ಯಾಸ ಜರುಗುವುದು. ಬಾಲಬಳಗ ಶಾಖೆ–ಯ ವಿದ್ಯಾರ್ಥಿಗಳಿಂದ ಚರಕ ನೂಲುವ ಪ್ರಾತ್ಯಕ್ಷಿಕೆ ಜರುಗುವುದು. ಇದೇ ಸಂದರ್ಭದಲ್ಲಿ ವಾರ್ತಾ ಇಲಾಖೆಯು ಆಯೋಜಿಸಿದ ಬಾಪೂಜಿ ಕುರಿತ ಪ್ರಬಂಧ ಸ್ಪರ್ಧೆ ವಿಜೇತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಿಸಲಾಗುವುದು.

ಸಭೆಯಲ್ಲಿ ಜಿಲ್ಲಾ ಉಪಕಾರ್ಯದರ್ಶಿ ಬಿ.ಎಸ್.ಮೂಗನೂರಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ ಬೆಕ್ಕೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಮಂಜುನಾಥ ಸುಳ್ಳೊಳ್ಳಿ ಸೇರಿದಂತೆ ಕಾಲೇಜು ಶಿಕ್ಷಣ ಇಲಾಖೆ, ಆಹಾರ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಶಿರಸ್ತೇದಾರ ಎಂ.ಜಿ. ಸೊಲಗಿ ಅವರು ಉಪಸ್ಥಿತರಿದ್ದರು.

# ಸರ್ ಸಿದ್ದಪ್ಪ ಕಂಬಳಿಯವರ ನಿವಾಸಕ್ಕೆ ಸಚಿವ ಖಂಡ್ರೆ ಭೇಟಿ



**ಹುಬ್ಬಳ್ಳಿ :** ಇಂದು ಅಳಗುಂಡಿ ಓಣಿಯಲ್ಲಿನ ಸರ್ ಸಿದ್ದಪ್ಪ ಕಂಬಳಿ ಅವರ ನಿವಾಸಕ್ಕೆ ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರಾದ ಈಶ್ವರ ಬಿ.ಖಂಡ್ರೆ ಮತ್ತು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು ಹಾಗೂ ಶಾಸಕರಾದ ಪ್ರಸಾದ ಅಬ್ಬಯ್ಯ ಅವರು ಭೇಟಿ ನೀಡಿದರು.

ಬಳಿಕ ಮಾತನಾಡಿದ ಈಶ್ವರ ಖಂಡ್ರೆ ಅವರು, ಸರ್ ಸಿದ್ದಪ್ಪ ಕಂಬಳಿ ಅವರ ವಿಚಾರಗಳು, ದೂರದೃಷ್ಟಿ ಇಂದಿಗೂ ಪ್ರಸ್ತುತವಾಗಿವೆ. ಎಲ್ಲರಿಗೂ ಸಮಪಾಲು, ಸಾಮಾಜಿಕ ನ್ಯಾಯ ಸಿಗಬೇಕು ಎಂಬ ನಿಟ್ಟಿನಲ್ಲಿ ನಮ್ಮ ಸರ್ಕಾರ ಕಾರ್ಯನಿರ್ವಹಿಸುತ್ತಿದೆ. ಸಮ ಸಮಾಜ ಮತ್ತು ಎಲ್ಲರಿಗೂ ಒಳ್ಳೆಯದು ಆಗುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಕರ್ನಾಟಕ ರಾಜ್ಯವನ್ನು ಆದರ್ಶ ಹಾಗೂ ಬಲಿಷ್ಠ ರಾಜ್ಯ ಮಾಡುವ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸುತ್ತಿದ್ದೇವೆ. ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಸರ್ ಸಿದ್ದಪ್ಪ ಕಂಬಳಿ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆಯುತ್ತಿದ್ದೇವೆ. ಸರ್ ಸಿದ್ದಪ್ಪ ಕಂಬಳಿ ಸಾಧನೆಗಳನ್ನು ಯುವಜನರಿಗೆ ತಿಳಿಯಪಡಿಸುವ ಕಾರ್ಯಗಳು ಆಗಬೇಕು ಎಂದು ಅವರು ತಿಳಿಸಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ನಮ್ಮೆಲ್ಲರಿಗೂ ಆದರ್ಶಪ್ರಾಯರಾಗಿದ್ದಾರೆ. ಸಮಾಜದಲ್ಲಿನ ಶೋಷಿತರು, ಬಡವರು, ಮಹಿಳೆಯರಿಗಾಗಿ ಅವರು ಸಲ್ಲಿಸಿದ ಕಾರ್ಯಗಳು ಐತಿಹಾಸಿಕವಾಗಿವೆ. ಎಂದಿಗೂ ಅಮರವಾಗಿರುವ ಕಾರ್ಯಗಳನ್ನು ಅವರು ಮಾಡಿದ್ದಾರೆ. ಅವರ ನಿಷ್ಠೆ, ಪ್ರಾಮಾಣಿಕತೆ, ಸರಳ ಜೀವನ ನಮಗೆ ಮಾದರಿಯಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲೂ ಸಹ ಸಾಧನೆಗೈದಿದ್ದಾರೆ. ಇಲ್ಲಿನ ನಿವಾಸದಲ್ಲಿ ಸರ್ ಸಿದ್ದಪ್ಪ ಕಂಬಳಿ ಅವರ ಪದವಿ, ಜೀವನ ಸಾಧನೆಗಳನ್ನು ಸಂರಕ್ಷಿಸಿ, ಕಾಪಾಡಿಕೊಂಡು ಹೋಗುತ್ತಿರುವ ಅವರ ಕುಟುಂಬಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

# ನಕಾರಾತ್ಮಕ ಸುದ್ದಿಗಳಿಗೆ ಪ್ರಾಧಾನ್ಯತೆ ಬೇಡ: ಸಿದ್ದು ಯಾಪಲಪರವಿ



**ಬೆಳಗಾವಿ :** ನಕಾರಾತ್ಮಕ ಸುದ್ದಿಗಳಿಗೆ ಮಾಧ್ಯಮಗಳು ಪ್ರಾಧಾನ್ಯತೆ ನೀಡಬಾರದು ಎಂದು ಹಿರಿಯ ಸಾಹಿತಿ ಸಿದ್ದು ಯಾಪಲಪರವಿ ಅವರು ಹೇಳಿದರು.

ಅವರಿಂದು ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಪತ್ರಕರ್ತರ ಸಂಘದ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ವಿಶೇಷವಾಗಿ ಪ್ರಸಾರವಾಗುವ ಬ್ರೇಕಿಂಗ್ ನ್ಯೂಸ್ ಗಳಲ್ಲಿ ಹೆಚ್ಚಾಗಿರುತ್ತದೆ ಅದ–ಕ್ಕೆ ಬದಲಾಗಿ ಸಕಾರಾತ್ಮಕ ಸುದ್ದಿಗಳಿಗೆ ಪ್ರಾಧಾನ್ಯತೆ ನೀಡುವ ಮೂಲಕ ಪತ್ರಿಕೋದ್ಯಮಕ್ಕೊಂದು ಹೊಸ ಆಯಾಮ ನೀಡಬೇಕು ಎಂದು ಅವರು ಸಲಹೆ ನೀಡಿ–ದರು. ಹಿರಿಯ ಪತ್ರಕರ್ತ ಮತ್ತು ಸಾಹಿತ್ಯ ಎಲ್‌ಎಸ್ ಶಾಸ್ತ್ರಿ ಅವರು ಮಾತನಾಡಿ ಪ್ರತಿಯೊಂದು ಸುದ್ದಿಯನ್ನು ಪ್ರತಿಯೊಂದು ಘಟನೆಯನ್ನು ಸಂದರ್ಭವನ್ನು ಸಂಸ್ಕರಿಸಿ ಸಮಾಜಕ್ಕೆ ಯಾವುದು ಉತ್ತಮ ಅದನ್ನು ಮಾತ್ರ ನೀಡುವ ಕಾರ್ಯ ಆಗಬೇಕಿದೆ ಎಂದ ಅವರು ಇಂದು ಸಂಸ್ಕಾರವಿಲ್ಲದ ವಿಚಾರಗಳೆ ಹೆಚ್ಚಿನ ಪ್ರಮಾಣದಲ್ಲಿ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿದ್ದು ಅದು ನಿಲ್ಲಬೇಕು ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ಅಲ್ಲಮಪ್ರಭು ಮಹಾಸ್ವಾಮಿಗಳು ಬೆಳಗಾವಿಯಂತಹ ಗಡಿ ಭಾಗದಲ್ಲಿ ಕೇಂದ್ರ ಸ್ಥಾನವಾಗಿಸಿಕೊಂಡು ರಾಜ್ಯದಾದ್ಯಂತ ಅತ್ಯುತ್ತಮ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಪತ್ರಕರ್ತರ ಸಂಘದ ಚಟುವಟಿಕೆಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿದ ಅವರು ಇದಕ್ಕಿಂತಲೂ ಹೆಚ್ಚಿನ ಸೇವಾ ಕಾರ್ಯ ಗ್ರಾಮೀಣ ಭಾಗದ ಪತ್ರಕರ್ತರಿಗೆ ಇವರಿಂದ ಸಲ್ಲಲಿ ಎಂದು ಶುಭ ಹಾರೈಸಿದರು.

ಈವರೆಗೆ ಸರ್ಕಾರದಿಂದ ಯಾವುದೇ ರೀತಿಯ ಸವಲತ್ತನ್ನು ಪಡೆಯದೆ ಯಾರಿಂದಲೂ ಆರ್ಥಿಕ ಸಹಾಯವನ್ನು ಬಯಸದೆ ಸಂಘಟನೆಯನ್ನು ಮುನ್ನಡೆಸಿಕೊಂಡು ಹೋಗಿದ್ದಲ್ಲದೆ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ಕಾಲಕಾಲಕ್ಕೆ ಸಹಾಯ ಮಾಡುತ್ತಿರುವುದು ಅತ್ಯಂತ ಸಂತಸದ ವಿಷಯ ಇಂತಹ ಪತ್ರಿಕಾ ಸಂಘಟನೆಗೆ ಸರ್ಕಾರ ಕೂಡ ಅಗತ್ಯದ ಎಲ್ಲ ರೀತಿಯ ಸಹಕಾರ ಸವಲತ್ತನ್ನು ನೀಡಿ ಪ್ರೋತ್ಸಾಹಿಸಬೇಕು ಎಂದು ಅವರು ಸರ್ಕಾರವನ್ನು ಆಗ್ರಹಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಮುರುಗೇಶ್ ಶಿವಪೂಜಿ ವಹಿಸಿ ಸಾಂದರ್ಭಿಕವಾಗಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀಮತಿ ಮಂಗಲಾ ಮೆಟಗುಡ್ ಅವರು ಸುಮಾರು ವರ್ಷಗಳಿಂದ ಸಂಘದ ಚಟುವಟಿಕೆಗಳನ್ನು ಹತ್ತಿರದಿಂದ ತಾವು ನೋಡುತ್ತಿದ್ದು ತಮಗೆ ಸಂತಸ ತಂದಿದೆ ತಮ್ಮ ಸಂಪೂರ್ಣ ಸಹಕಾರ ಬೆಂಬಲ ಈ ಚಟುವಟಿಕೆಗಳಿಗೆ ಇದೆ ಎಂದು ಹೇಳಿದರು. ಹಿರಿಯ ಪತ್ರಕರ್ತೆ ಶ್ರೀಮತಿ ಸುಧಾಪಟ್ಟೇದ ಮತ್ತು ಶ್ರೀ ಶಶಿ ಬೆಳಗುಂದಕರ್ ಅವರುಗಳನ್ನು ಸಂಘದ ಪರವಾಗಿ ಸತ್ಕರಿಸಲಾಯಿತು.

ಸಂಘದ ಹಿರಿಯ ಉಪಾಧ್ಯಕ್ಷ ಸುದೇಶ ಕುಮಾರ್ ಅವರು ಕಾರ್ಯಕ್ರಮವನ್ನು ನಿರ್ದೇಶಿಸಿದರು, ಸಂಘದ ಸದಸ್ಯರಾದ ಶ್ರೀಮತಿ. ಕೀರ್ತಿ ಕಾಸರಗೋಡು ಅವರು ಸಂಘದ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್ ಮುಚಳಂಬಿ ಅವರು ಸ್ವಾಗತಿಸಿದರು. ಕೊಪ್ಪಳ ಜಿಲ್ಲಾಧ್ಯಕ್ಷ ಶರಣಪ್ಪ ಗುಮಗೇರಾ ಅವರು ವಂದಿಸಿದರು. ಕಾರ್ಯಕ್ರಮದಲ್ಲಿ ಹಿರಿಯಸಂಪಾದಕರಾದ ಸಲೀಂ ಧಾರವಾಡಕರ್, ಡಾ.ರಾಜೇಂದ್ರ ಪವಾರ್, ಪತ್ರಕರ್ತರ ಸಹಕಾರಿ ಸಂಘದ ಉಪಾಧ್ಯಕ್ಷ ವಿಷ್ಣು ದೇವಾಡಿಗ, ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ ಹೊಸ್ಕೆರಾ, ರಾಜ್ಯ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಶಂಕರ್ ಕುದುರೆಮೋತಿ, ಬಾಗಲಕೋಟೆ ಜಿಲ್ಲಾಧ್ಯಕ್ಷ ವಿಜಯಶಂಕರ್, ಗದಗ ಜಿಲ್ಲಾಧ್ಯಕ್ಷ ರಮೇಶ್ ಭಜಂತ್ರಿ, ಹೊಸಪೇಟೆ ಜಿಲ್ಲಾ ಕಾರ್ಯಾಧ್ಯಕ್ಷ ಸೋಮಶೇಖರ್ ಹಿರೇಮಠ, ರಾಮನಗರ ಜಿಲ್ಲೆಯ ರೂಪೇಶ್ ಕುಮಾರ್ , ಹಾವೇರಿಯ ಮಾಲತೇಶ ಅಂಗೂರ್, ಚರಣ್ ರಾಜ್ ವಿಜಾಪುರ್, ಟ್ರಸ್ಟಿ ಬಸವರಾಜ್ ಪುಟ್ಟಿ, ಚಾಮರಾಜನಗರ ಜಿಲ್ಲಾಧ್ಯಕ್ಷ ಬಂಗಾರಪ್ಪ, ಮೈಸೂರಿನ ಶ್ರೀಮತಿ ಪೂರ್ಣಿಮಾ ಪವಾರ್ ಹಾಗೂ 20 ಜಿಲ್ಲೆಗಳ ನೂರಕ್ಕೂ ಅಧಿಕ ಪತ್ರಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಟೆನಿಕ್ವಾಯಿಟ್‌ನಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



**ಕೊಲ್ಹಾರ :** ವಿಜಯಪುರದಲ್ಲಿ ಗುರುವಾರ ಶಾಲಾ ಶಿಕ್ಷಣ ಇಲಾಖೆ (ಪ.ಪೂ) ವತಿಯಿಂದ ಜರುಗಿದ ಜಿಲ್ಲಾ ಮಟ್ಟದ ಪದವಿ ಪೂರ್ವ ಕಾಲೇಜುಗಳ ಟೆನಿಕ್ವಾಯಿಟ್ ಸ್ಪರ್ಧೆಯಲ್ಲಿ ಇಲ್ಲಿನ ಸಂಗಮೇಶ್ವರ ಪದವಿ ಪೂರ್ವ ಕಾಲೇಜಿನ ಬಾಲಕಿಯರು ಭಾಗವಹಿಸಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಯಾದಗಿರಿಯಲ್ಲಿ ನಡೆಯುವ ರಾಜ್ಯ ಮಟ್ಟದ ಟೆನಿಕ್ವಾಯಿಟ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ರಾಜ್ಯ ಮಟ್ಟಕ್ಕೆ ಆಯ್ಕೆಯಾದ ದ್ವಿತೀಯ ಪಿ.ಯು.ಸಿ ಬಾಲಕಿಯರಾದ ಕಾದಂಬರಿ ಪೂಜಾರಿ,ರೇಣುಕಾ ನಾಯಕ ,ಪ್ರಥಮ ಪಿ.ಯು.ಸಿ ಸರಿತಾ ಚವ್ಹಾಣ ,ಸುಕನ್ಯಾ ಚಿಮ್ಮಲಗಿ,ಸಂಜನಾ ಬೆಳ್ಳುಬ್ಬಿಯವರಿಗೆ ವಿಜಯಪುರ ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಶ್ರೀದುರ್ಗಿ ಹಾಗೂ ಕ್ರೀಡಾ ಸಂಯೋಜಕ ಗಣೇಶ ಗುನ್ನಾಪುರ ಪ್ರಶಸ್ತಿ ವಿತರಿಸಿದರು.

**ಅಭಿನಂದನೆಗಳು :**

ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಬಿ.ಯು. ಗಿಡ್ಡಪ್ಪಗೋಳ,ಕಾರ್ಯದರ್ಶಿ ಎಸ್.ಬಿ.ಪತಂಗಿ ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರು,ಕಾಲೇಜಿನ ಸಿಬ್ಬಂದಿ ವರ್ಗದವರು

ಮತ್ತು ದೈಹಿಕ ಶಿಕ್ಷಣ ಉಪನ್ಯಾಸಕ ರಮೇಶ ತೋಟದ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.ತಂಡದ ವ್ಯವಸ್ಥಾಪಕರಾಗಿ ಉಪನ್ಯಾಸಕ ಎಂ.ಸಿ.ಹೊನವಾಡ ಕಾರ್ಯನಿರ್ವಹಿಸಿದರು.

# ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ(ರಿ) ಜಿಲ್ಲಾ ಘಟಕದ ಅಧ್ಯಕ್ಷರಾಗಿ ಪ್ರೇಮನಾಥ್ ಗರಸಂಗಿ, ಉಪಾಧ್ಯಕ್ಷರಾಗಿ ರವಿ ಬಬಲೇಶ್ವರ ನೇಮಕ



**ಬೆಂಗಳೂರು :** ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ(ರಿ) ಬಾಗಲಕೋಟ ಜಿಲ್ಲಾ ಘಟಕದ ನೂತನವಾಗಿ ಅಧ್ಯಕ್ಷರಾಗಿ ಪ್ರೇಮನಾಥ್ ಗರಸಂಗಿ (ಬಾಗಲಕೋಟ)ಹಾಗೂ ಜಿಲ್ಲಾ ಉಪಾಧ್ಯಕ್ಷರಾಗಿ ರವಿ ಬಬಲೇಶ್ವರ(ಜಮಖಂಡಿ) ಅವರನ್ನು ನೇಮಕ ಮಾಡಿ ಇಂದು ದಿನಾಂಕ:24–09–2024 ರಂದು ರಾಜ್ಯ ಘಟಕ ಆದೇಶ ಮಾಡಿದೆ.

ರಾಜ್ಯ ಘಟಕದ ಅಧ್ಯಕ್ಷರಾದ ನಿವೃತ್ತ ಐಎಎಸ್ ಅಧಿಕಾರಿ ಸಿದ್ದ0ಯ್ಯ ಅವರು ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ನೀಡಿ ಶುಭ ಹಾರೈಸಿದರು.

ಬಾಗಲಕೋಟೆ ನಗರದ ಅಕ್ಷ0ಯ ಹೋಟೆಲ್ ಸಭಾ ಭವನದಲ್ಲಿ ದಿನಾಂಕ:16–09–2024 ರಂದು ಜರುಗಿದ ಜಿಲ್ಲೆ0ಯ ಎಲ್ಲ ತಾಲೂಕಿನ ಮುಖಂಡರುಗಳು ಸಭೆ0ಯಲ್ಲಿ ಸರ್ವಾನುಮತದಿಂದ ಆ0ಯ್ಕೆ ಮಾಡಿ ರಾಜ್ಯ ಘಟಕಕ್ಕೆ ಕಳುಹಿಸಿದ್ದರು.

ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಘಟಕದ ಪದಾಧಿಕಾರಿಗಳು ಆ0ಯ್ಕೆಪಟ್ಟಿಗೆ ಅನುಮತಿ ನೀಡಿ ಪ್ರಮಾಣ ಪತ್ರ ನೀಡಿತು.

ಈ ಸಂದರ್ಭದಲ್ಲಿ ನೂತನವಾಗಿ ಅಧ್ಯಕ್ಷರಾಗಿ ಆ0ಯ್ಕೆ0ಯಾದ ಪ್ರೇಮನಾಥ ಗರಸಂಗಿ,ಉಪಾಧ್ಯಕ್ಷರಾಗಿ ಆ0ಯ್ಕೆ0ಯಾಗಿರುವ ರವಿ ಬಬಲೇಶ್ವರ, ಸಮಾಜದ ಹಿರಿ0ಯ ಮುಖಂಡರಾದ ಬಸವರಾಜ ಚಲವಾದಿ (ಬಾಗಲಕೋಟ) ನ್ಯಾ0ಯವಾದಿ ಎನ್.ಬಿ.ಗಸ್ತಿ,ಮಹೇಶ ಬೀಳಗಿ ಮೊದಲಾದವರು ಉಪಸ್ಥಿತರಿದ್ದರು.

# ಸಂಗೀತದ ಮುಂದೆ ಮಾತಿಗೆ ಸ್ಥಾನವಿಲ್ಲ: ಡಾ.ರಾಮಕೃಷ್ಣ ಮರಾಠೆ




**ಬೆಳಗಾವಿ :** ತನ್ನದೇ ಲೋಕಕ್ಕೆ ಎಲ್ಲರನ್ನೂ ಒಯ್ಯುವ ಶಕ್ತಿಯನ್ನು ಸಂಗೀತ ಹೊಂದಿದೆ. ಸಂಗೀತದ ವೇದಿಕೆಯಲ್ಲಿ ಮಾತಿಗೆ ಸ್ಥಾನವಿಲ್ಲ ಎಂದು ಹಿರಿಯ ಸಾಹಿತಿ, ರಂಗಕರ್ಮಿ ಡಾ.ರಾಮಕೃಷ್ಣ ಮರಾಠೆ ಹೇಳಿದ್ದಾರೆ.

ಬೆಳಗಾವಿಯ ರಾಣಿ ಚನ್ನಮ್ಮ ನಗರದ ಆರ್ಕಿಡ್ಸ್ ಅಪಾರ್ಟ್‌ಮೆಂಟ್ ನಲ್ಲಿ ಶನಿವಾರ ಸಂಜೆ ಸ್ಪಂದನ ಮೆಲೋಡಿಸ್ ಆಯೋಜಿಸಿದ್ದ ಗಾನ ಕುಸುಮ – ನಾದಮಯ ಸಂಜೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂಗೀತದ ಕುರಿತು ದ.ರಾ.ಬೇಂದ್ರೆಯವರ ಕವನದ ಸಾಲುಗಳನ್ನು ಉಲ್ಲೇಖಿಸಿ ಮಾತನಾಡಿದ ಮರಾಠೆ, ಸಂಗೀತಕ್ಕಿರುವ ಅದ್ಭುತ ಶಕ್ತಿ ಬೇರೆ ಯಾವುದಕ್ಕೂ ಇಲ್ಲ. ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರು ಬೆಳಗಾವಿಯಲ್ಲಿ ಸಾಕಷ್ಟು ಜನರಿದ್ದಾರೆ. ಸ್ಪಂದನ ಮೆಲೋಡಿಸ್ ತಂಡ ಕಳೆದ 6 ವರ್ಷದಿಂದ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜನರಿಗೆ ಮನರಂಜನೆ ನೀಡುತ್ತ ಬಂದಿದೆ ಎಂದು ಶ್ಲಾಘಿಸಿದರು. ಹಿರಿಯ ಪತ್ರಕರ್ತ ಎಂ.ಕೆ.ಹೆಗಡೆ ವೇದಿಕೆಯಲ್ಲಿದ್ದರು.

ಇದೇ ವೇಳೆ, ಗಾನ ಕುಸುಮ ಎ0ಬ ಶೀರ್ಷಿಕೆಯಲ್ಲಿ, ಸ0ಗೀತ ಜಾದೂಗಾರ ಆರ್. ಡಿ. ಬರ್ಮನ್ ರವರ ಗೀತೆಗಳು ಹಾಗೂ ನಟ ಅನ0ತನಾಗ್ ಹಿಟ್ಸ್ ನ್ನು ವಿವಿಧ ಕಲಾವಿದರು ಹಾಡುವ ಮೂಲಕ ಸಂಗೀತ ರಸಿಕರ ಮನಸೂರೆಗೊಳಿಸಿದರು. ಆಕಾಶದಿ0ದ ದರೆಗಿಳಿದ ರಂಭೆ (ಚಿತ್ರ– ಚ0ದನದ ಗೊ0ಬೆ), ಚುರಾಲಿಯಾ ಹೇ ತುಮ್ನೇ (ಚಿತ್ರ ಯಾದೋ0ಕಿ ಬಾರಾತ್) ಮೊದಲಾದ ಪ್ರಸಿದ್ಧ ಗೀತೆಗಳು ಜನರ ಮನಸೂರೆಗೊ0ಡಿತು. ಗಾಯನದ ಜೊತೆಗೆ ಹಾಡುಗಳಿಗೆ ಚಿಣ್ಣರಾದ ಚೇತನ್ ಮತ್ತು ಮನಸ್ವಿ ನೃತ್ಯವು ಸಭೀಕರನ್ನು ಮನರ0ಜಿಸಿತು.

ಪೂರ್ಣಾ ಹೆಗಡೆ ಅವರಿಂದ ಗಣಪತಿ ಸ್ತೋತ್ರದ ಮೂಲಕ ಕಾರ್ಯಕ್ರಮ ಆರಂಭವಾಯಿತು. ಸ್ಪ0ದನ ಮೆಲೋಡೀಸ್ ನ ರೂವಾರಿ ಶಾ0ತಾ ಆಚಾರ್ಯ ಹಾಗೂ ತ0ಡದ ವಿಶ್ವ ದೇಸಾಯಿ, ಭುಜ0ಗ ಪಾಟಿಲ್, ಮಹೇಶ ಕುಲ್ಕರ್ಣಿ, ಕವಿತಾ ಜಾಧವ್, ಜ್ಯೋತಿ ಗವಿಮಠ್ ಅವರು ಹಾಡುಗಳನ್ನು ಹಾಡಿದರು. ಇದೇ ವೇಳೆ ಶರಣಗೌಡ ಪಾಟೀಲ ಹಾಗೂ ಮನೋಜ್ ಮಾಲಗತ್ತೆ ಸಹ ಗೀತೆಗಳನ್ನು ಪ್ರಸ್ತುತಪಡಿಸಿದರು.

# ಗಮನ ಸೆಳೆದ ರಾಷ್ಟ್ರ ಮಟ್ಟದ ಕುಸ್ತಿ ಪಂದ್ಯಾವಳಿ

## ರಾಷ್ಟ್ರ ಮಟ್ಟದ ಜಂಗಿ ನಿಕಾಲಿ ಕುಸ್ತಿ । ನಾಲ್ಕು ಗಂಟೆಗಳ ಕಾಲ ನಡೆದ ಕುಸ್ತಿ ಪಂದ್ಯಗಳು । ಗಣ್ಯರಿಂದ ಕುಸ್ತಿ ವೀಕ್ಷಣೆ







**ಬನಹಟ್ಟಿ :** ಇಲ್ಲಿಯ ಕಾಡಸಿದ್ಧೇಶ್ವರ ಜಾತ್ರೆಯ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ನಿರ್ಮಾಣಗೊಂಡ ಕುಸ್ತಿ ಮೈದಾನದಲ್ಲಿ ನಡೆದ ರಾಷ್ಟ್ರ ಮಟ್ಟದ ಕುಸ್ತಿ ಪಂದ್ಯಾವಳಿಗಳು ಕುಸ್ತಿ ಪ್ರೇಮಿಗಳ ಗಮನ ಸೆಳೆಯಿತು.
ಏ ಮ್ಯಾಲ್ ಎತ್ತ, ಬಿಡಬ್ಯಾಡ ತಮ್ಯಾ, ಏ ಇನ್ನೂ ಕುಸ್ತಿ ಆಗಿಲ್ಲ , ಡಾವ ಬರೋಬ್ಬರಿ ಹಾಕಲಿಲ್ಲ, ಇಂಥ ಮಾತುಗಳು ಕುಸ್ತಿ ಮೈದಾನದಲ್ಲಿ ಕೇಳಿ ಬಂದವು. ಇಲ್ಲಿ ಕೆಲವು ಸಮಯದಲ್ಲಿ ಪ್ರೇಕ್ಷಕರೇ ನಿರ್ಣಾಯಕರಾಗುತ್ತಾರೆ.
ದೆಹಲಿ, ಹರಿಯಾಣ, ಪಂಜಾಬ, ನೆರೆಯ ಮಹಾರಾಷ್ಟ್ರ ಮತ್ತು ಕರ್ನಾಟಕದ ಪ್ರಮುಖ ನಗರ ಮತ್ತು ಸುತ್ತ ಮುತ್ತಲಿನ ಗ್ರಾಮೀಣ ಭಾಗದ ಅಂದಾಜು 80 ಕ್ಕೂ ಹೆಚ್ಚು ಜೋಡಿಗಳು ಇಲ್ಲಿ ನಾಲ್ಕು ಗಂಟೆಗಳಿಗಿಂತ ಹೆಚ್ಚು ಕಾಲ ತಮ್ಮ ಕುಸ್ತಿ ಕಲೆಯನ್ನು ಪ್ರದರ್ಶನ ಮಾಡಿದರು.
ಹಿರಿಯ ಕುಸ್ತಿ ಪೈಲ್ವಾನರಾದ ದಾವಲಸಾಬ್ ಆಸಂಗಿ, ಕಾಡಪ್ಪ ಜಿಡ್ಡಿಮನಿ, ಧರೆಪ್ಪ ಪಾಟೀಲ, ಮಲ್ಲಪ್ಪ ಗೌಡಪ್ಪನವರ, ರಮೇಶ ಜಿಡ್ಡಿಮನಿ, ಕಾಡಪ್ಪ ಮಹೀಷವಾಡಗಿ ನಿರ್ಣಾಯಕರಾಗಿ ಕಾರ್ಯ ಮಾಡಿದರು.
ರಾಜೇಂದ್ರ ಹಾಗೂ ಶ್ರೀನಿವಾಸ ಭದ್ರನವರ ಕುಸ್ತಿ ಮೈದಾನಕ್ಕೆ ಪೂಜೆ ಸಲ್ಲಿಸಿದರು.
ಜಿಲ್ಲಾ ಪಂಚಾಯಿತ್ತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ, ಜಮಖಂಡಿಯ ಮಾಜಿ ಶಾಸಕ ಆನಂದ ನ್ಯಾಮಗೌಡ, ಮಾಜಿ ವಿಧಾನ ಪರಿಷತ್ ಸದಸ್ಯ ಜಿ. ಎಸ್. ನ್ಯಾಮಗೌಡ, ಶ್ರೀಶೈಲ ಧಬಾಡಿ, ಮಲ್ಲಿಕಾರ್ಜುನ ಬಾಣಕಾರ, ಸಿದ್ರಾಮ ಸವದತ್ತಿ, ಮಲ್ಲಿಕಾರ್ಜುನ ತುಂಗಳ, ಚನವೀರಪ್ಪ ಹಾದಿಮನಿ, ಧರೆಪ್ಪ ಉಳ್ಳಾಗಡ್ಡಿ, ಡಾ. ಎ. ಆರ್. ಬೆಳಗಲಿ, ಡಾ. ಪ್ರಭು ಪಾಟೀಲ, ಶಂಕರ ಜಾಲಿಗಿಡದ, ದೇವಲ ದೇಸಾಯಿ, ಡಾ. ಪದ್ಮಜೀತ ನಾಡಗೌಡ ಪಾಟೀಲ, ಶೇಖರ ಸಂಪಗಾಂವಿ, ದಾನಪ್ಪ ಹುಲಜತ್ತಿ, ಸದಾಶಿವ ಗುಂಡಿ, ಪ್ರಕಾಶ ಸಿಂಗನ್, ಎಂ. ಎಂ. ಕವಟಗಿ ಸೇರಿದಂತೆ ಅನೇಕರು ರಬಕವಿ ಬನಹಟ್ಟಿ ಹಾಗೂ ಸುತ್ತ ಮುತ್ತಲಿನ ಗ್ರಾಮೀಣ ಭಾಗದ ಜನರು ಕುಸ್ತಿಯನ್ನು ವೀಕ್ಷಣೆ ಮಾಡಿದರು.

## ವಿಜಯಪುರ ಮಳೆಹಾನಿ ಪ್ರದೇಶಕ್ಕೆ ಸಚಿವ ಎಂ.ಬಿ.ಪಾಟೀಲ ಭೇಟಿ

### ಸರಿಯಾಗಿ ಕಾರ್ಯನಿರ್ವಹಿ ಎಂದು ಅಧಿಕಾರಿಗಳಿಗೆ ಲಾಸ್ಟ್ ವಾರ್ನಿಂಗ್ ಕೊಟ್ಟ ಸಚಿವರು



**ವರದಿ:ಲಾಲಸಾಬ ಸವಾರಗೋಳ**

ವಿಜಯಪುರದಲ್ಲಿ ಸೋಮವಾರ ರಾತ್ರಿ ಸುರಿದ ಭಾರಿ ಮಳೆಗೆ ರಸ್ತೆಯಲ್ಲದೇ ಹಳ್ಳ ಕೊಳ್ಳಗಳು ಸಹ ತುಂಬಿ ಹರಿಯುತ್ತಿದ್ದು ಪ್ರವಾಹ ಪರಿಸ್ಥಿತಿ ಉಂಟಾಗಿದೆ.
ಜಿಲ್ಲಾಡಳಿತ ಸಮರ್ಪಕವಾಗಿ ಕಾರ್ಯನಿರ್ವಹಿಸಿ ಜನರ ನೆರವಿಗೆ ತೆರಳುವಂತೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ವಿಜಯಪುರ ಜಿಲ್ಲೆಯ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ನೀಡಿದರು. ಇಂದು ನಗರ ಮತ್ತು ಜಿಲ್ಲೆಯಾದ್ಯಂತ ಸಂಚರಿಸಿ ಜನರಿಗೆ ಸಾಂತ್ವನ ಮತ್ತು ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು. ಈ ವೇಳೆ ಅಧಿಕಾರಿಗಳಿಗೆ ಸರಿಯಾಗಿ ಕಾರ್ಯನಿರ್ವಹಿಸಿ ಇದು ಲಾಸ್ಟ್ ವಾರ್ನಿಂಗ್ ಎಂದು ಕೆಂಡಾಮಂಡಲರಾದರು
ನಂತರ ವಿಜಯಪುರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದೆ. ಸಭೆಯಲ್ಲಿ ಪ್ರವಾಹ ಪರಿಸ್ಥಿತಿಗೆ ಕಾರಣವಾದ ಅಂಶಗಳು, ನೀರು ಸರಾಗವಾಗಿ ಹರಿದು ಹೋಗಲು ಮುಖ್ಯವಾದ ರಾಜಕಾಲುವೆ ಒತ್ತುವರಿಯಾಗಿರುವುದು ಹಾಗೂ ಕೋಟೆಗೋಡೆ ಸುತ್ತಲೂ ಆಗಿರುವ ಒತ್ತುವರಿಯನ್ನು ಯಾರ ಮುಲಾಜು ನೋಡದೆ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಾಕೀತು ಮಾಡಿದ್ದು 2–3 ವಾರಗಳ ಗುಡುವು ನೀಡಿದ್ದೇನೆ. ನಂತರ ಖುದ್ದು ಭೇಟಿ ನೀಡಿ ಪುನಃ ಪರಿಶೀಲಿಸುತ್ತೇನೆ ಎಂದು ತಿಳಿಸಿದ್ದೇನೆ.
ಹಾನಿಯಾಗಿರುವ ಬೆಳೆ, ಮನೆ, ಆಸ್ತಿ ವಿವರ ಕಲೆಹಾಕಿ ಹಾಗೂ ಇನ್ನಿತರೆ ಹಾನಿ ಪ್ರಮಾಣವನ್ನು ಅಂದಾಜಿಸಿ ಸಾಧ್ಯವಾದಷ್ಟು ಬೇಗ ಅಗತ್ಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವಂತೆಯೂ ಅಧಿಕಾರಿಗಳಿಗೆ ಸೂಚಿಸಿದ್ದೇನೆ.

## ಸ್ವಯಂ ಉದ್ಯೋಗ ಪಡೆದು ಸ್ವಾವಲಂಭಿಗಳಾಗಿ–ನಾಗರಾಜ ಮುಂಡರಗಿ

# ಚರ್ಮ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಸಮಾರೋಪ




**ಚಿಮ್ಮಡ :** ಸರಕಾರ ಹಾಗೂ ನಿಗಮದ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಂಡು ಸ್ವಯಂ ಉದ್ಯೋಗ ನಡೆಸುವುದರ ಮೂಲಕ ಸ್ವಾವಲಂಭಿಗಳಾಗಿ ಬದುಕಬೇಕೆಂದು ಬಾಬು ಜಗಜೀವನರಾಮ್ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷ ನಾಗರಾಜ ಮುಂಡರಗಿ ಹೇಳಿದರು.
ಗ್ರಾಮದ ಜನತಾ ಪ್ಲಾಟ್ ಆವರಣದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ 60 ದಿನಗಳ ತರಬೇತಿ ಸಮಾರೋಪ ಹಾಗೂ ಫಲಾನುಭಿಗಳ ಸೌಲಭ್ಯ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಪ್ರತಿಯೊಬ್ಬ ತರಬೇತುದಾರರು ನಿಗಮದಿಂದ ದೊರೆಯುವ ಸಾಲ ಸೌಲಭ್ಯ ಪಡೆಯುವ ಮೂಲಕ ಸ್ವಯಂ ಉದ್ಯೋಗ ಪ್ರಾರಂಭಿಸಿ ಆರ್ಥಿಕವಾಗಿ ಸಬಲರಾಗಿ ತಮ್ಮ ಮಕ್ಕಳನ್ನು ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸಮಾಜದಲ್ಲಿ ಗುರುತಿಸಿಕೊಳ್ಳುವಂತೆ ಬೆಳೆಸಬೇಕೆಂದರು.
ಜಿಲ್ಲಾ ಸಂಯೋಜಕ ಎನ್.ಎ. ಗಂಗಾಧರ ಮಾತನಾಡಿ ಬಾಬು ಜಗಜೀವನರಾಮ್ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಇದುವರೆಗೆ ಗ್ರಾಮ ವ್ಯಾಪ್ತಿಯಲ್ಲಿಯೇ ನೂರಾರು ಜನ ಫಲಾನುಭವಿಗಳು ವ್ಯಾನಿಟಿ ಬ್ಯಾಗ್, ಪರ್ಸ್, ಪೌಚ್ ಸೇರಿದಂತೆ ಹಲವಾರು ವಸ್ತುಗಳನ್ನು ತಯಾರಿಸುವ ತರಬೇತಿ ಪಡೆದುಕೊಂಡಿದ್ದು ಪ್ರತಿಯೊಬ್ಬರು ಈ ಉದ್ಯೋಗ ಮುಂದುವರಿಸುವ ಮೂಲಕ ಸ್ವಾವಲಂಭಿಗಳಾಗಿ ಬದುಕಬೇಕೆಂದರು.
ಪ್ರಮುಖರಾದ ಸುಂದರ ಪೂಜಾರಿ, ಉಪನ್ಯಾಸಕ ಶೇಖರ ದೊಡವಾಡ, ಸಂಘಟಕರಾದ ಶ್ರೀಮತಿ ರೇಖಾ ಸರವಿ, ಸದಾಶಿವ ಮೇತ್ರಿ, ಮಹಾದೇವ ಗೋವಿಂದಗೋಳ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು.
ಇದೇ ಸಂಧರ್ಬದಲ್ಲಿ ತರಬೇತಿ ಪಡೆದ ಫಲಾನುಭವಿಗಳಿಗೆ ಚರ್ಮ ಕೈಗಾರಿಕಾ ಯಂತ್ರ ಹಾಗೂ ಪರಿಕರಗಳನ್ನು ವಿತರಿಸಲಾಯಿತು.

## ಅ.3 ರಿಂದ 11ರವರೆಗೆ ನವರಾತ್ರಿ ದೇವಿ ಪುರಾಣ–ಮಹಾಲಿಂಗಪುರ ದಸರಾ ಸಾಂಸ್ಕೃತಿಕ ಉತ್ಸವ



**ಮಹಾಲಿಂಗಪುರ :** ಬನಶಂಕರಿ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಮಹಾಲಿಂಗಪುರ ಸಾಂಸ್ಕೃತಿಕ ಉತ್ಸವ ಸಂಘ (ರಿ) ಸಂಯುಕ್ತಾಶ್ರಯದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಬನಶಂಕರಿದೇವಿ ದೇವಸ್ಥಾನದಲ್ಲಿ ನವರಾತ್ರಿ ನಿಮಿತ್ಯ ಅ.3ರಿಂದ 11ರವರೆಗೆ 34ನೇ ವರ್ಷದ ದೇವಿ ಪುರಾಣ ಹಾಗೂ ಮಹಾಲಿಂಗಪುರ ದಸರಾ ಸಾಂಸ್ಕೃತಿಕ ಉತ್ಸವ ಜರುಗಲಿದೆ ಎಂದು ಹಿರಿಯರಾದ ಮಲ್ಲಪ್ಪ ಭಾಂವಿಕಟ್ಟಿ ಹೇಳಿದರು.
ಬನಶಂಕರಿ ದೇವಸ್ಥಾನದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಅ.3 ರಿಂದ ಅ.11ವರೆಗೆ ನಡೆಯುವ ದೇವಿ ಪುರಾಣ ಹಾಗೂ ದಸರಾ ಉತ್ಸವ ಕಾರ್ಯಕ್ರಮದಲ್ಲಿ ಸ್ಥಳೀಯ ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮಿಜಿಯವರ ದಿವ್ಯ ಸಾನಿಧ್ಯದಲ್ಲಿ ಬೆಂಗಳೂರಿನ ಅನ್ನದಾನ ಮಹಾಸ್ವಾಮಿಜಿಯವರು ಪ್ರತಿನಿತ್ಯ ಸಂಜೆ 7 ರಿಂದ 8 ಗಂಟೆಗೆ ದೇವಿ ಪುರಾಣ ಪ್ರವಚನ, ನಂತರ ದಸರಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮಗಳು ಜರುಗಲಿವೆ.
ಅ.3ರಂದು ಮುಂಜಾನೆ 8ಗಂಟೆಗೆ ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದಿಂದ ಕುಂಬಮೇಳದೊಂದಿಗೆ ದೇವಿಯ ಬೆಳ್ಳಿಮೂರ್ತಿ ಹಾಗೂ ದೇವವರ ದಾಸಿಮಯ್ಯಮೂರ್ತಿಯಭವ್ಯಮೆರವಣಿಗೆ ನಡೆಯಲಿದೆ. 12ಕ್ಕೆ ಸೋಲ್ಲಾಪೂರ ಮೈಂದರಗಿಯ ಅಭಿನವ ರೇವಣಸಿದ್ದ ಪಟ್ಟಣದೇವರಿಂದ ದಾಸಿಮಯ್ಯನವರ ಕುರಿತು ಪ್ರವಚನ, ಮಧ್ಯಾಹ್ನ 1–30ಕ್ಕೆ ಮರೆಗುದ್ದಿ ಡಾ.ನಿರುಪಾದೀಶ್ವರ ಸ್ವಾಮಿಗಳಿಂದ ದಾಸಿಮಯ್ಯ ಮೂರ್ತಿಗೆ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮ, ದಾಸಿಮಯ್ಯ ಮೂರ್ತಿದಾನಿಗಳಾದ ಬಿ.ವ್ಹಿ. ಕೆರೂರ ವಕೀಲರಿಂದ ಮಹಾಪ್ರಸಾದ ಜರುಗಲಿದೆ ಎಂದರು.
ಅ.3 ರಂದು ಸಂಜೆ ಸಹಜಾನಂದ ಸ್ವಾಮಿಜಿ ಅವರಿಂದ ದೇವಿ ಪುರಾಣ ಮತ್ತು ದಸರಾ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ದೇವಿ ಪುರಾಣ ಕಾರ್ಯಕ್ರಮದಲ್ಲಿ 9 ದಿನಗಳ ಕಾಲ ಇಟ್ನಾಳದ ಶ್ರೀಕಾಂತ ಲ.ನಾಯಿಕ ಅವರಿಂದ ಹಾರ್ಮೋನಿಯಂ,ಶಿರೋಳದ ಹಣಮಂತ ಅಂಕದ ಅವರಿಂದ ತಬಲಾ ವಾದನ ಸೇವೆ ನಡೆಯಲಿದೆ ಎಂದರು.

**ಅ.5ಕ್ಕೆ ಕೊಪ್ಪಳಶ್ರೀ ಆಗಮನ :**

ಡಾ। ಬಿ.ಡಿ.ಸೋರಗಾಂವಿ ಮಾತನಾಡಿ ಅ.5ರಂದು ಸಂಜೆ 5ಕ್ಕೆ ಕೊಪ್ಪಳದ ಗವಿಸಿದ್ದೇಶ್ವರ ಮಹಾಸ್ವಾಮಿಗಳಿಂದ ವಿಶೇಷ ಧರ್ಮಸಭೆ ನಡೆಯಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶ್ವಸಿಗೊಳಿಸಬೇಕು. ಜೊತೆಗೆ ಅ.8ರ ಮಂಗಳವಾರ ಅನ್ನಪೂರ್ಣೆಶ್ವರಿ ನೇಕಾರ ಮಹಿಳಾ ಸಂಘದಿಂದ ಕುಂಕುಮಾರ್ಚನೆ ಜರುಗುವುದು. ಅ.11ರ ಶುಕ್ರವಾರ ಶೋಭಾ ಚಂದ್ರಶೇಖರ ಹುಣಶ್ಯಾಳ ಇವರಿಂದ ಉಡಿತುಂಬುವ ಕಾರ್ಯಕ್ರಮವಿದೆ. ಒಂಭತ್ತು ದಿನ, ಒಂಭತ್ತು ಜನ ದಾನಿಗಳಿಂದ ಸಾವಿರಾರು ಜನರಿಗೆ ಮಹಾಪ್ರಸಾದ ಸೇವೆ ನಡೆಯಲಿದೆ ಎಂದರು.
ಬಿ.ಸಿ.ಪೂಜಾರಿ ಮಾತನಾಡಿ ಅ.3ರಂದು ಮಹಾಲಿಂಗಪುರ ಶಾಲಾ ಮಕ್ಕಳಿಂದ, ಅ.4ರಂದು ವಿಜಯಪುರದ ಕು.ಸಾಕ್ಷೀ ಹಿರೇಮಠ ಹಾಗೂ ಬೆಂಗಳೂರಿನ ಯುವವಾಗ್ಮಿ ಕು.ಹಾರಿಕಾ ಮಂಜುನಾಥ ಅವರಿಂದಧರ್ಮಸಂಸ್ಕೃತಿದಿಕ್ಸೂಚಿಭಾಷಣ ಜರುಗಲಿದೆ. ಅ.5ರಂದು ಕನ್ನಡ ಕೋಗಿಲೆ ಖ್ಯಾತಿಯ ಕು.ಮಹನ್ಯಾ ಗು.ಪಾಟೀಲ ಅವಳಿಂದ ಗಾಯನ, ಅ.6ರಂದು ವಿ.ಕೆ. ಡ್ಯಾನ್ಸ್ ಮತ್ತು ಫಿಟ್‌ನೆಸ್ ಅಕಾಡೆಮಿ ಮಹಾಲಿಂಗಪುರ ಮಕ್ಕಳಿಂದ ನೃತ್ಯ, ಅ.7ರಂದು ಬೀದರ ನವಲಿಂಗ ಪಾಟೀಲ ಅವರಿಂದ ಹಾಸ್ಯಸಂಜೆ, ಅ.8ರಂದು ಹೊಸಪೇಟೆ ನ್ಯಾಟ್ಯನಾದ ಕಲಾತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ, ಅ.9 ರಂದು ರವೀಂದ್ರ ಸೋರಗಾಂವಿ, ಅಥಣಿಯ ಕು.ಸುಷ್ಮಾ ನಂದಗಾಂವ ಅವರಿಂದ ಸಂಗೀತ ಕಾರ್ಯಕ್ರಮ, ಅ.10ರಂದು ಸರಿಗಮಪ ಖ್ಯಾತಿಯ ಕುಮಾರಿ ದಿಯಾ ಹೆಗಡೆ ಅವಳಿಂದ ಸಂಗೀತ ಕಾರ್ಯಕ್ರಮ, ಅ.11ರಂದು ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ 9ದಿನಗಳ ಕಾಲ ಮಹಾಲಿಂಗಪುರ ದಸರಾ ಸಾಂಸ್ಕೃತಿಕ ಉತ್ಸವದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ಜರುಗಲಿವೆ ಎಂದರು.
ನಾರಾಯಣ ಕಿರಗಿ, ರಾಜೇಶ ಭಾವಿಕಟ್ಟಿ ಮಾತನಾಡಿದರು.ಇದೇ ಸಂದರ್ಭದಲ್ಲಿ ಮಹಾಲಿಂಗಪುರ ದಸರಾ ಸಾಂಸ್ಕೃತಿಕ ಉತ್ಸವ ಮತ್ತು ನವರಾತ್ರಿ ದೇವಿ ಪುರಾಣ ಕಾರ್ಯಕ್ರಮದ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಲಾಯಿತು.
ಹಿರಿಯರಾದ ಲಕ್ಕಪ್ಪ ಚಮಕೇರಿ, ಪ್ರಭು ಬೆಳಗಲಿ, ಶ್ರೀಶೈಲಪ್ಪ ಬಾಡನವರ, ಸಿದಗಿರೆಪ್ಪ ಕಾಗಿ, ಸಿದ್ದಪ್ಪ ನಿಂಬರಗಿ, ಗಂಗಪ್ಪ ಕರಡಿ, ಮುದಕಪ್ಪ ಬೇವಿನಗಿಡದ, ಸುಭಾಸ ಭಾವಿಕಟ್ಟಿ, ಶಂಕರ ಅಂಬಿ, ಈಶ್ವರ ಚಮಕೇರಿ, ಶ್ರೀಶೈಲ ಕಿರಗಟಗಿ, ಮಹಾದೇವ ಹುಣಶ್ಯಾಳ, ಎಸ್.ಆಯ್.ನುಚ್ಚಿ, ಜಿ.ಎಸ್. ಗೊಂಬಿ, ಮಹಾಲಿಂಗಪ್ಪ ಅನಂತಪೂರ, ಸುನೀಲ ಜಮಖಂಡಿ, ಮಲ್ಲಪ್ಪ ನಿಂಬರಗಿ, ಬಸವರಾಜ ಚಮಕೇರಿ, ಈಶ್ವರ ಮುರಗೋಡ, ಮಹಾದೇವ ಗಲಗಲಿ, ಪ್ರಕಾಶ ಬಾಡನವರ, ಸಂಜು ಜಮಖಂಡಿ, ವಿನೋದ ಚಮಕೇರಿ, ಬಸವರಾಜ ಹುಲ್ಯಾಳ, ಚಂದ್ರು ಕಾಗಿ, ಮಹಾಲಿಂಗ ಹುಣಶ್ಯಾಳ, ಸುದರ್ಶನ ಹಿಕಡಿ, ಗುರು ಬಾಡಗಿ, ಮಹಾಲಿಂಗ ಹಿಕಡಿ, ಶಿವಾನಂದ ಕಿತ್ತೂರ, ಚನಮಲ್ಲ ಕರಡಿ, ಸಿದ್ದು ಧಡೂತಿ, ಅಶೋಕ ಮಂಟೂರ, ಮಂಜುನಾಥ ಭಾವಿಕಟ್ಟಿ, ರಮೇಶ ಭಾವಿಕಟ್ಟಿ ಸೇರಿದಂತೆ ಹಲವರು ಇದ್ದರು.

## ಸಂಕಲನ ಆರಂಭಿಸಿದ 'ತಗ್ಗಟ್ಟಿ' ಸಿನೇಮಾ



**ಬೆಂಗಳೂರ :** ಶ್ರೀ ಚೆನ್ನಿಗರಾಯಸ್ವಾಮಿ ಆಶೀರ್ವಾದದೊಂದಿಗೆ ಸಿಸಿ ಸಿನಿ ಪ್ರೊಡಕ್ಷನ್ ಬೆಂಗಳೂರ ಅವರ ಚೊಚ್ಚಲ ಕಾಣಿಕೆ ಹರಿಹರನ್ .ಬಿ .ಪಿ. ನಿರ್ದೇಶನದಲ್ಲಿ 'ತಗ್ಗಟ್ಟಿ' ಎಂಬ ಸಾಂಸಾರಿಕ , ಥ್ರಿಲ್ಲರ್ ,ಪ್ರೀತಿ ,ಬಾಂಧವ್ಯದ ಕಥಾ ಹಂದಿರದ ಕನ್ನಡ ಚಲನಚಿತ್ರ ಸದ್ದಿಲ್ಲದೆ ಶೇ.95 ರಷ್ಟು ಭಾಗದ ಚಿತ್ರೀಕರಣ ಮುಗಿಸಿ ಸಂಕಲನ ಕಾರ್ಯ ಆರಂಭಿಸಿದೆ.
'ತಗ್ಗಟ್ಟಿ' .ಇದು ಕರ್ನಾಟಕ–ತಮಿಳುನಾಡಿನ ನಡುವೆ ಒಂದು ಹಳ್ಳಿಯ ಹೆಸರು . ಆ ಹಳ್ಳಿಯಲ್ಲಿ ನಡೆದ ಪವಾಡದಮೇಲೆಸೃಷ್ಟಿಯಾಗಿರುವಸತ್ಯಘಟನೆಯನ್ನು ಆಧರಿಸಿದ ಕಥೆ ಇದು. ಬಹು ತಾರಾ ಬಳಗದೊಂದಿಗೆಮೂಡಿಬರುತ್ತಿರುವಚಿತ್ರಇದಾಗಿದ್ದು ,ತಾರಾಗಣದಲ್ಲಿರೇಖಾದಾಸ್,ಶಿವಕುಮಾರಆರಾಧ್ಯ, ಮಂಡ್ಯ ಸಿದ್ದು ,ಡೈಮಂಡ್ ರಾಜಣ್ಣ , 4 ಯುವ ನಾಯಕ ನಾಯಕಿಯರು ಇದ್ದು, ಚಲನಚಿತ್ರ ಹಾಗೂ ಕಿರುತೆರೆಗಳಲ್ಲಿ ಖಳನಟ ಮುಖ್ಯಪಾತ್ರವನ್ನುವಹಿಸುವ ರೇಣು ಶಿಖಾರಿಯವರು ಈ ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಬಾಲರಾಜ್‌ವಾಡಿಯ ತಂದೆ ಮಗನ ಪಾತ್ರವೂ ತುಂಬಾ ಪ್ರಮುಖವಾಗಿದೆ. ಮುಖ್ಯ ಪಾತ್ರದಲ್ಲಿ ಪ್ರವೀಣ್‌ಕುಮಾರ್ ಟಿ.ಸಿ ಅಮೋಘವಾಗಿ ಅಭಿನಯಿಸಿದ್ದಾರೆ. ಸಾಹಿತ್ಯವನ್ನು,ಲವ್ ಇನ್ ಮಂಡ್ಯ' ಖ್ಯಾತಿಯ ಅರಸು ಅಂತಾರೆ ಮತ್ತು 'ಮುಸ್ಸಂಜೆ ಮಾತು' ಚಲನಚಿತ್ರ ಪ್ರಖ್ಯಾತ ಸಾಹಿತಿ ರೇವಣ್ಣ ನಾಯಕ್ ದೊಡ್ಡ ಕಾಡನೂರು ರಚಿಸಿದ್ದಾರೆ.
ಕನ್ನಡ ಚಿತ್ರರಂಗದ ಬಾದಾಮಿ ಎಂದು ಕರೆಯಲ್ಪಡುವ ಎಟಿ.ರವೀಶ್‌ಸಂಗೀತಸಂಯೋಜಿಸಿದ್ದಾರೆ.ನಾಗೇಂದ್ರ ರಂಗಹರಿ ಅವರು ಅದ್ಬುತ ಛಾಯಾಗ್ರಹಣ ಮಾಡಿದ್ದು ,ಪ್ರಸಾಧನ ಗುರು(ಆನಂದ), ಸಂಕಲನ ಮಾಂತ್ರಿಕ ಮುತ್ತುರಾಜ್ .ಟಿ ಅವರ ಸಂಕಲನವಿದೆ , ಪಿ.ಆರ್.ಓ ಸುಧೀಂದ್ರ ವೆಂಕಟೇಶ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ , ಸಹಾಯಕ ನಿರ್ದೇಶನ ಎಂ.ಡಿ.ರಾಘವೇಂದ್ರ ಅವರದಿದ್ದು ಚಿತ್ರಕ್ಕೆ ಚಂದ್ರಮಾ ಚನ್ನಾಚಾರಿ ಬಂಡವಾಳ ಹೂಡಿದ್ದಾರೆ.
ಚಿಕ್ಕಮಂಗಳೂರು ,ಊಟಿ , ಬೆಂಗಳೂರು , ಕನಕಪುರ ಸುತ್ತಮುತ್ತ 84 ದಿನಗಳ ಕಾಲ ಚಿತ್ರೀಕರಣವಾಗಿದೆ. ಚಿತ್ರದಲ್ಲಿ ಒಟ್ಟು ಆರು ಹಾಡುಗಳಿದ್ದು ಒಂದು ಹಾಡಿನ ಚಿತ್ರೀಕರಣ ಮಾತ್ರ ಬಾಕಿ ಇದ್ದು , ಮುತ್ತುರಾಜ್ ಅವರು ಸಂಕಲನ ಕಾರ್ಯ ಆರಂಭಿಸಿದ್ದು, ಶೀಘ್ರದಲ್ಲೇ ಉಳಿದಿರುವ ಒಂದು ಹಾಡಿನ ಚಿತ್ರೀಕರಣ ಮುಗಿಸಿ ಬೇಗನೇ ಬೆಳ್ಳಿತೆರೆಗೆ ತರುವ ಆಲೋಚನೆ ಇದೆ ಎಂದು ನಿರ್ದೇಶಕಹರಿಹರನ್.ಬಿ.ಪಿ,ಚಿತ್ರದನಿರ್ಮಾಪಕರಾದ ಚಂದ್ರಮಾ ಚನ್ನಾಚಾರಿ ಹೇಳುತ್ತಾರೆ.

**ವರದಿ: ಡಾ.ಪ್ರಭು ಗಂಜಿಹಾಳ ಮೊ: 9448775346**

## ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯ ಕಲ್ಪಿಸಿಕೊಡಿ: ತಂಬ್ರಳ್ಳಿ




**ಕೊಪ್ಪಳ :** ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯ ಒದಗಿಸಿಕೊಟ್ಟು ಅವರ ಮುಂದಿನ ಭವಿಷ್ಯ ಉಜ್ವಲಗೊಳಿಸುವ ನಿಟ್ಟಿನಲ್ಲಿ ಶ್ರಮಿಸಲು ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿದೆ ಪ್ರತಿಯೊಬ್ಬರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯ ಒದಗಿಸಿ ಕೊಡಿ ಎಂದು ಕೊಪ್ಪಳ ಇನ್ನರ್ ವೀಲ್ ಕ್ಲಬ್‌ಅಧ್ಯಕ್ಷರಾದ ಉಮಾ ಮಹೇಶ್ ತಂಬ್ರಳ್ಳಿ ಹೇಳಿದರು. ಅವರು ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾಶ್ರೀ ಎಂಬ ಬಡ ಮತ್ತು ಪ್ರತಿಭಾವಂತವಿದ್ಯಾರ್ಥಿನಿಗೆ ಸಾಕ್ಷರತಾ ದಿನಾಚರಣೆ ಪ್ರಯುಕ್ತ ಕ್ಲಬ್ಬಿನ ಐ ಎಸ್ ಓ ಮಧು ನಿಲೋಗಲ ಅವರ ವತಿಯಿಂದ ಅವರ ನಿವಾಸದಲ್ಲಿ ಕೊಡಮಾಡಿದ ವೈದ್ಯಕೀಯ ಅಧ್ಯಯನ ಮಾಡಲು ಸಹಾಯವಾಗುವ ನೀಟ್ ತರಬೇತಿ ಪಠ್ಯಪುಸ್ತಕಗಳನ್ನು ವಿತರಿಸಿ ಆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿ ಮಾತನಾಡಿದರು
ಮುಂದುವರೆದು ಮಾತನಾಡಿ ಆಶಕ್ತ ವಿದ್ಯಾರ್ಥಿ ನಿಗೆ ವೈದ್ಯಕೀಯ ಅಧ್ಯಯನ ಮಾಡಲು ಸಹಾಯವಾಗುವ ನೀಟ್ ತರಬೇತಿ ಪಠ್ಯಪುಸ್ತಕಗಳನ್ನು ವಿತರಿಸಿದ ಮಧು ನಿಲೋಗಲ್ ರವರ ಸಮಾಜ ಸೇವಾ ಕಾರ್ಯಕ್ಕೆ ಅಭಿನಂದಿಸಿದ ಅವರು ಮಧು ನಿಲೋಗಲ ರವರು ತಮ್ಮ ನಿವಾಸದಲ್ಲಿ ವೈಯಕ್ತಿಕವಾಗಿ ಬಡ ಮತ್ತು ಪ್ರತಿಭಾ ವಂತ ವಿದ್ಯಾರ್ಥಿನಿ ವಿದ್ಯಾಶ್ರೀ ರವರಿಗೆ ಪ್ರೋತ್ಸಾಹದಾಯಕವಾಗಿ ಶೈಕ್ಷಣಿಕ ಸಾಮಗ್ರಿ ಮತ್ತು ಇತರ ಅಗತ್ಯ ಸಲಕರಣೆಗಳು ದೇಣಿಗೆಯಾಗಿ ನೀಡಿ ಆ ಬಡ ವಿದ್ಯಾರ್ಥಿ ನಿಗೆ ಪ್ರೋತ್ಸಾಹಿಸಿರುವದಕ್ಕೆ ಅವರಿಗೆ ಅಭಿನಂದಿಸಿದರು, ಈ ಸಂದರ್ಭದಲ್ಲಿ ಕೊಪ್ಪಳ ಇನ್ನರ್ ವೀಲ್ ಕ್ಲಬ್ ಮಾಜಿ ಅಧ್ಯಕ್ಷ ರಾದ ನಿತಾ ತಂಬ್ರಳ್ಳಿ ಸಂಪಾದಕೀ ನಾಗ ವೇಣಿ ಖಜಾಂಚಿ ಆಶಾ ಕವಲೂರು ಸೇರಿದಂತೆ ಕಾರ್ಯಕರ್ತರು ಮತ್ತು ಮಹಿಳೆಯರು ಪಾಲ್ಗೊಂಡಿದ್ದರು.

## ಪ್ರಶಸ್ತಿಗಾಗಿ ಕಾಯಕ ಮಾಡದೇ ಮನಸ್ಸಿನ ತೃಪ್ತಿಗಾಗಿ ಕಾಯಕ ಮಾಡುವುದು ಲೇಸು: ಎಸ್.ವಿ. ಬುರ್ಲಿ




**ವಿಜಯಪುರ :** ಎಲೆ ಮರೆಯ ಕಾಯಿಯಂತೆ ಹಗಲಿರುಳೆನ್ನದೇ ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದೇ ಆದಲ್ಲಿ ಜನರು ಮೆಚ್ಚುವುರಲ್ಲದೇ ಗೌರವ ಸನ್ಮಾನಗಳು ಲಭಿಸುವುದುಂಟು.
ತೋರಿಕೆಗಾಗಿ ಅಥವಾ ಪ್ರಶಸ್ತಿಗಾಗಿ ಕಾಯಕ ಮಾಡದೇ ಮನಸ್ಸಿನ ತೃಪ್ತಿಗಾಗಿ ಕಾಯಕ ಮಾಡುವುದು ಲೇಸು ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ, ರಾಜ್ಯ ಪ್ರಶಸ್ತಿ ಪುರಸ್ಕೃತರೂ ಆದ ಎಸ್.ವಿ. ಬುರ್ಲಿ ಅಭಿಪ್ರಾಯಪಟ್ಟರು.
ಇತ್ತೀಚೆಗೆ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ವಿಜಯಪುರ ಜಿಲ್ಲಾ ಘಟಕದ ಕಚೇರಿಯಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪುರಸ್ಕೃತರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.
ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಬೆಂಗಳೂರು ಇವರು ನೀಡುವ "ರಾಜ್ಯ ಮಟ್ಟದ ಕಾಯಕರತ್ನ" ಪ್ರಶಸ್ತಿಗೆ ಪುರಸ್ಕೃತರಾದ ಸರೋಜಾ ಕೌಲಾಪುರ ಹಾಗೂ ವಿಜಯಪುರ ಶಾಲಾ ಶಿಕ್ಷಣ ಇಲಾಖೆಯವರು ಶಿಕ್ಷಕ ದಿನಾಚರಣೆ–ಯಂದು ನೀಡುವ "ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ" ಪ್ರಶಸ್ತಿ ಪುರಸ್ಕೃತರಾದ ರಾಜಕುಮಾರ ಚವ್ಹಾಣ ಅವರನ್ನು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಜಿಲ್ಲಾ ಘಟಕ ವಿಜಯಪುರ ವತಿಯಿಂದ ಸನ್ಮಾನಿಸಲಾಯಿತು.
ಪ್ರಧಾನ ಕಾರ್ಯದರ್ಶಿ ಆರ್. ಆರ್.ಮಿಸಾಳೆ, ಕಾರ್ಯದರ್ಶಿ ಬಿ.ಆಯ್. ಪರಂಡಿ, ಉಪಾಧ್ಯಕ್ಷ ಬಿ.ಎ. ಆಸಂಗಿ, ರಾಜಕುಮಾರ ಅರಗೆ, ಸುಮಾ ಚೌಧರಿ, ಸದಸ್ಯರಾದ ಜ್ಯೋತಿ ದೇಸಾಯಿ, ರೂಪಾ ಪಡನಾಡ, ಜಯಶ್ರೀ ಬುರ್ಲಿ, ಎ.ವಿ. ಪಾಟೀಲ, ಮಹಾದೇವ ದೇವರ, ಬಸವರಾಜ ಚೌಧರಿ ಹಾಗೂ ಇತರರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State